ಬೆಂಗಳೂರು ವಿಶ್ವವಿದ್ಯಾಲಯ

# ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಸಾರ ಸಿದ್ಧಪಡಿಸಿ ಸ್ನಾತಕ ಅಧ್ಯಯನ ಮಂಡಳಿಯಲ್ಲಿ ಅನುಮೋದನೆಗೊಂಡಿರುವ

# ಸ್ನಾತಕ ವಿವಿಧ ಪದವಿಗಳ ಕನ್ನಡ ಭಾಷಾ ಪಠ್ಯ, ಬಿ.ಎ. ಐಚ್ಛಿಕ ಕನ್ನಡ, ಮುಕ್ತ ಆಯ್ಕೆ ಹಾಗೂ ಕಡ್ಡಾಯ ಕನ್ನಡ ಪಠ್ಯಕ್ರಮ

**2021–22 ನೇ ಶೈಕ್ಷಣಿಕ ಸಾಲಿನಿಂದ ಅನ್ವಯ**

**ಕನ್ನಡ ಅಧ್ಯಯನ ಕೇಂದ್ರ**

**ಬೆಂಗಳೂರು ವಿಶ್ವವಿದ್ಯಾಲಯ**

**ಜ್ಞಾನಭಾರತಿ–ಬೆಂಗಳೂರು–56**

# ಕನ್ನಡ ಸ್ನಾತಕ ಅಧ್ಯಯನ ಮಂಡಳಿ ಸಭೆಯ ನಡಾವಳಿ

ದಿನಾಂಕ: 24–09–2021 ರಂದು ಬೆಳಿಗ್ಗೆ 10.30 ಘಂಟೆಗೆ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರ ಕೊಠಡಿಯಲ್ಲಿ ಕನ್ನಡ ಸ್ನಾತಕ ಅಧ್ಯಯನ ಮಂಡಳಿಯ ಸಭೆಯು ನಡೆಯಿತು. ಕನ್ನಡ ಸ್ನಾತಕ ಅಧ್ಯಯನ ಮಂಡಳಿಯ ಈ ಕೆಳಕಂಡ ಆಂತರಿಕ ಹಾಗೂ ಬಾಹ್ಯ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

| | | | |
|---|---|---|---|
| 1. | ಡಾ. ಸಿ.ನಾಗಭೂಷಣ | ಅಧ್ಯಕ್ಷರು | ಸಹಿ ಇದೆ |
| 2. | ಡಾ. ರಾಮಲಿಂಗಪ್ಪ ಟಿ.ಬೇಗೂರು | ಆಂತರಿಕ ಸದಸ್ಯರು | ಸಹಿ ಇದೆ |
| 3. | ಡಾ. ಎನ್.ಆರ್. ಲಲಿತಾಂಬ | ಆಂತರಿಕ ಸದಸ್ಯರು | ಸಹಿ ಇದೆ |
| 4. | ಶ್ರೀಮತಿ. ರತ್ನಪ್ರಭ | ಆಂತರಿಕ ಸದಸ್ಯರು | ಸಹಿ ಇದೆ |
| 5. | ಡಾ. ಬಿ.ಯು.ಸುಮ | ಆಂತರಿಕ ಸದಸ್ಯರು | ಸಹಿ ಇದೆ |
| 6. | ಶ್ರೀ. ರಾಜಶೇಖರ ವಿ.ಎಚ್. | ಆಂತರಿಕ ಸದಸ್ಯರು | ಸಹಿ ಇದೆ |
| 7. | ಡಾ. ಪ್ರಕಾಶ್ | ಆಂತರಿಕ ಸದಸ್ಯರು | ಸಹಿ ಇದೆ |
| 8. | ಶ್ರೀ. ಎಂ.ನಾಗರಾಜು | ಆಂತರಿಕ ಸದಸ್ಯರು | ಸಹಿ ಇದೆ |
| 9. | ಡಾ. ಲಿಂಗರಾಜಯ್ಯ | ಬಾಹ್ಯ ಸದಸ್ಯರು | ಸಹಿ ಇದೆ |
| 10. | ಡಾ. ಬಿ.ಆರ್.ನರಸಿಂಹಮೂರ್ತಿ | ಬಾಹ್ಯ ಸದಸ್ಯರು | ಸಹಿ ಇದೆ |
| 11. | ಡಾ. ಅಮರೇಂದ್ರ ಶೆಟ್ಟಿ ಆರ್. | ವಿಶೇಷ ಆಹ್ವಾನಿತರು | ಸಹಿ ಇದೆ |
| 12. | ಡಾ. ಲಕ್ಷ್ಮೀನಾರಾಯಣ | ವಿಶೇಷ ಆಹ್ವಾನಿತರು | ಸಹಿ ಇದೆ |
| 13. | ಡಾ. ಶಿವರಾಜು ಬಿ.ಇ | ವಿಶೇಷ ಆಹ್ವಾನಿತರು | ಸಹಿ ಇದೆ |

ಕನ್ನಡ ಸ್ನಾತಕ ಅಧ್ಯಯನ ಮಂಡಳಿಯ ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಿ, ಪರಿಶೀಲಿಸಿ ಅನುಮೋದಿಸಲಾಯಿತು. 1. ಕನ್ನಡ ಸ್ನಾತಕ ವಿವಿಧ ಪದವಿಗಳ (ಬಿ.ಎ, ಬಿಎಸ್‌ಡಬ್ಲ್ಯು, ಬಿವಿಎ, ಬಿ.ಎಸ್ಸಿ, ಬಿ.ಎಸ್ಸಿ (ಫ್ಯಾಡ್), ಬಿ.ಕಾಂ, ಬಿಬಿಎ ಏವಿಯೇಷನ್, ಬಿಬಿಎ, ಬಿಎಚ್‌ಎಂ ಮುಂತಾದ) ಒಂದು ಮತ್ತು ಎರಡನೇ ಸೆಮಿಸ್ಟರ್‌ನ ಭಾಷಾ ಪಠ್ಯಗಳ ಕಂಟೆಂಟ್ ಅನ್ನು ಪರಿಶೀಲಿಸಿ ಅನುಮೋದಿಸಲಾಯಿತು.

2. ಒಂದು ಮತ್ತು ಎರಡನೇ ಸೆಮಿಸ್ಟರ್‌ಗೆ ಐಚ್ಛಿಕ ಕನ್ನಡ ಪಠ್ಯದ ಕಂಟೆಂಟ್ ಅನ್ನು ಪರಿಶೀಲಿಸಿ, ಅನುಮೋದನೆ ನೀಡಲಾಯಿತು.

3. ಒಂದು ಮತ್ತು ಎರಡನೇ ಸೆಮಿಸ್ಟರ್‌ನ ಕನ್ನಡ ಮುಕ್ತ ಆಯ್ಕೆ ಪಠ್ಯದ ಕಂಟೆಂಟ್ ಅನ್ನು ಪರಿಶೀಲಿಸಿ, ಅನುಮೋದನೆ ನೀಡಲಾಯಿತು.

4. ಕನ್ನಡೇತರರಿಗೆ ಕನ್ನಡ: ಕನ್ನಡ ಕಲಿಕೆ ಪಠ್ಯವನ್ನು ಒಂದನೇ ಸೆಮಿಸ್ಟರ್‌ನ ಪದವಿಗಾಗಿ ಸಿದ್ಧಪಡಿಸಿ, ಅನುಮೋದಿಸಲಾಯಿತು.

5. ಕನ್ನಡ ಸ್ನಾತಕ ವಿವಿಧ ಪದವಿಗಳ ಭಾಷಾ ಪಠ್ಯದ ಪುಸ್ತಕಗಳು, ಐಚ್ಛಿಕ ಪಠ್ಯ ಪುಸ್ತಕ ಮುಕ್ತ ಆಯ್ಕೆ ಪಠ್ಯ, ಕನ್ನಡ ಕಲಿಕೆ ಪಠ್ಯಗಳ ಸಿದ್ಧಪಡಿಸುವಿಕೆಗೆ ಸೇವಾನುಭವ ಮತ್ತು ಬೋಧನಾನುಭವದ ಜ್ಯೇಷ್ಠತೆಯನ್ನು ಇಟ್ಟುಕೊಂಡು ಸಂಪಾದಕರ ಪಟ್ಟಿಯನ್ನು ಸಿದ್ಧಪಡಿಸಿ ಆಯಾ ಸಂಪಾದಕರುಗಳಿಗೆ ನಿಗದಿತ ಅವಧಿಯೊಳಗೆ ಪಠ್ಯಪುಸ್ತಕವನ್ನು ಸಿದ್ಧಪಡಿಸಿ, ಸಲ್ಲಿಸುವ ನಿರ್ಣಯವನ್ನು ಕೈಗೊಂಡು ಅನುಮೋದಿಸಲಾಯಿತು.ಕೂಡಲೇ ಆಯಾ ಸಂಪಾದಕರುಗಳು ಪಠ್ಯ ಪುಸ್ತಕಗಳ ಸಂಪಾದನಾ ಪ್ರಕ್ರಿಯೆಯಲ್ಲಿ ಸಕ್ರೀಯವಾಗಿ ತೊಡಗಿಕೊಳ್ಳಲು ಸಂಪರ್ಕಿಸಿ ಮಾಹಿತಿಯನ್ನು ಕೊಡ ಮಾಡಲಾಯಿತು. ಒಂದು ವೇಳೆ ಕೆಲವು ಪದವಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಕಡಿಮೆ ಇದ್ದಲ್ಲಿ ಅಂತಹ ಕೋರ್ಸ್‌ಗಳಿಗೆ ಭಾಷಾ ಪಠ್ಯವನ್ನು ಡಿಜಿಟಲ್ ಆವೃತ್ತಿಯಲ್ಲಿ ನೀಡಲು ಮತ್ತು ಆ ಪಠ್ಯವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಹಾಕಲು ಒಪ್ಪಲಾಯಿತು.

6. ಕನ್ನಡ ಸ್ನಾತಕ ವಿವಿಧ ಪದವಿಗಳ ಭಾಷಾ ಪಠ್ಯದ ಪುಸ್ತಕಗಳ ಪಠ್ಯ ಎಲ್ಲವನ್ನೂ ಸಂಪಾದಕರುಗಳ ನೇತೃತ್ವದಲ್ಲಿ ಸಿದ್ಧಪಡಿಸಲು ಕಾಲಾವಕಾಶ ಬೇಕಾಗಿರುವುದರಿಂದ 1 ಮತ್ತು 2 ನೇ ಸೆಮಿಸ್ಟರ್ ನ ಭಾಷಾ ಪಠ್ಯಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಮೊದಲನೇ ಸೆಮಿಸ್ಟರ್ ನ ಪಠ್ಯವನ್ನು ಸಿದ್ಧಪಡಿಸಿ ನಂತರದಲ್ಲಿ ಎರಡನೇ ಸೆಮಿಸ್ಟರ್ ನ ಪಠ್ಯವನ್ನು ಸಿದ್ಧಪಡಿಸಿ ಪ್ರಸಾರಾಂಗದ ವತಿಯಿಂದ ಪ್ರಕಟಿಸಲು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಸಭೆಯು ನಿರ್ಣಯಿಸಿತು. ವಿಶ್ವವಿದ್ಯಾಲಯದ ಜಾಲತಾಣದಲ್ಲಿ upload ಮಾಡಲು ಈಗಾಗಲೇ ಸಂಬಂಧಪಟ್ಟ ಸಂಪಾದಕರುಗಳು ಸಂಪಾದಿಸಿರುವ ಮೊದಲನೇ ಸೆಮಿಸ್ಟರ್ ನ ವಿವಿಧ ಪಠ್ಯಗಳ ವಿವರವನ್ನು ಹಾಗೂ ಎರಡನೇ ಸೆಮಿಸ್ಟರ್ ನ ಘಟಕಾವಾರು ಶೀರ್ಷಿಕೆಗಳನ್ನು ಸಿದ್ಧಪಡಿಸಿ ಸಲ್ಲಿಸಲು ಸಭೆಯು ಅನುಮೋದಿಸಿತು.

6. ಕನ್ನಡ ಸ್ನಾತಕ ವಿವಿಧ ಪದವಿಗಳ (ಬಿ.ಎ, ಬಿಎಸ್‌ಡಬ್ಲ್ಯು, ಬಿವಿಎ, ಬಿ.ಎಸ್ಸಿ, ಬಿ.ಎಸ್ಸಿ (ಫ್ಯಾಡ್), ಬಿ.ಕಾಂ, ಬಿಬಿಎ ಏವಿಯೇಷನ್, ಬಿಬಿಎ, ಬಿಎಚ್‌ಎಂ ಮುಂತಾದ) ಒಂದನೇ ಸೆಮಿಸ್ಟರ್‌ನಲ್ಲಿ ಮೊದಲನೆ ಘಟಕ ಕನ್ನಡ ನಾಡು ನುಡಿ ಚಿಂತನೆಯನ್ನು ಎಲ್ಲಾ ಪದವಿಗಳಿಗೂ ಸಾಮಾನ್ಯಗೊಳಿಸಿರುವುದರಿಂದ ಒಂದು ವೇಳೆ ಸಂಪಾದನೆಯ ಸಮಯದಲ್ಲಿ ಪುನರಾವರ್ತನೆಗೊಂಡಲ್ಲಿ ಅದನ್ನು ಪಠ್ಯದ ಚೌಕಟ್ಟಿನಲ್ಲಿಯೇ ನಂತರದಲ್ಲಿ ಬದಲಾವಣೆ ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.

ಅಧ್ಯಕ್ಷರು

ಕನ್ನಡ ಸ್ನಾತಕ ಅಧ್ಯಯನ ಮಂಡಳಿ

ಕನ್ನಡ ಅಧ್ಯಯನ ಕೇಂದ್ರ

ಬೆಂಗಳೂರು ವಿಶ್ವವಿದ್ಯಾಲಯ

# ರಾಷ್ಟ್ರೀಯ ಶಿಕ್ಷಣ ನೀತಿ 2020ರ ಹಿನ್ನೆಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ಸ್ನಾತಕ ಪದವಿಗಳ ಕನ್ನಡ ಭಾಷಾ ಪಠ್ಯಗಳ ಬಿ.ಎ. ಐಚ್ಛಿಕ ಕನ್ನಡ, ಮುಕ್ತ ಆಯ್ಕೆ ಹಾಗೂ ಕಡ್ಡಾಯ ಕನ್ನಡ ಪಠ್ಯಕ್ರಮ ರಚನೆಯ ಆಶಯ ಮತ್ತು ಪಠ್ಯದ ಕಂಟೆಂಟ್:

ಭಾರತ ಸರ್ಕಾರದ 2020ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಲಿಕೆಯ ಫಲಿತ ಮತ್ತು ಸಾಧನೆಗಳ ಸಮತೋಲನಕ್ಕೆ ಮಹತ್ವ ನೀಡಲಾಗಿದೆ. ಕಲೆ ಮತ್ತು ವಿಜ್ಞಾನ, ವಾಣಿಜ್ಯ, ಶುದ್ಧ ಶೈಕ್ಷಣಿಕ ಚಟುವಟಿಕೆಗಳು, ವೃತ್ತಿಪರ ಶಿಕ್ಷಣ ಮತ್ತು ಪಠ್ಯೇತರ ಚಟುವಟಿಕೆಗಳ ನಡುವೆ ಪೂರಕ ಸಂಬಂಧ ಇರಬೇಕೆಂಬುದು ಆದರ ಮುಖ್ಯ ಆಶಯವಾಗಿರುವುದು ವಿಶಿಷ್ಟ ಸಂಗತಿಯಾಗಿದೆ. ಅಲ್ಲದೆ ಬೋಧನೆ ಮತ್ತು ಕಲಿಕೆಯಲ್ಲಿ ಬಹುಭಾಷಿಕತೆಗೆ ಪ್ರೋತ್ಸಾಹ ನೀಡುವ ಬಗೆಗೂ ಒತ್ತುಕೊಟ್ಟಿರುವುದು ಮಹತ್ವದ ವಿಷಯವಾಗಿದೆ. ಶಿಕ್ಷಣ ವ್ಯವಸ್ಥೆ ಮತ್ತು ವಿದ್ಯಾರ್ಥಿಗಳ ವ್ಯಕ್ತಿತ್ವ ಬೆಳವಣಿಗೆಯಲ್ಲಿ ಭಾಷೆಗಳು ವಹಿಸುವ ನಿರ್ಣಾಯಕವಾದ ಪಾತ್ರವನ್ನು ಹೊಸ ಶಿಕ್ಷಣ ನೀತಿಯು ಒಪ್ಪಿದೆ. ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯಲ್ಲಿ ಮುಂದುವರಿಯಲು ಎಲ್ಲ ಬಗೆಯ ತೀರ್ಮಾನಗಳಲ್ಲಿ ಪೂರ್ಣ ಸ್ವಾತಂತ್ರ, "ಸಮಾನತೆ ಮತ್ತು ಸಮಾವರ್ತನೆ (ಇನ್‌ಕ್ಲೂಸಿವ್) ಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸುತ್ತ ಈ ಬಗೆಯ ಕ್ರಿಯಾಶೀಲತೆಯನ್ನು ಪ್ರೋತ್ಸಾಹಿಸಲು ಉನ್ನತ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಸೇರಿದಂತೆ ಮಹಾವಿದ್ಯಾಲಯಗಳು ಪಠ್ಯಕ್ರಮ ಅಧ್ಯಯನ ಮತ್ತು ಮೌಲ್ಯಮಾಪನ ವಿಷಯಗಳಲ್ಲಿ ಹೊಸತನವನ್ನು ಅಳವಡಿಸಲು ಸ್ವಾತಂತ್ರ್ಯವನ್ನು ನೀಡಲಾಗಿದೆ. ಸಂಪರ್ಕ ಮಾಧ್ಯಮದ ಜೊತೆಗೆ ಸಂಸ್ಕೃತಿ ಮತ್ತು ಮೌಲ್ಯಗಳನ್ನು ನಾಲ್ಕು ವರ್ಷದ ಬಹುಶಿಸ್ತೀಯ ಪದವಿ ಕೋರ್ಸುಗಳಲ್ಲಿ ಬೆಳೆಸುವುದು ಭಾಷಾ ಕಲಿಕೆಯ ಉದ್ದೇಶವಾಗಿದೆ. ಅಲ್ಲದೆ ಭಾಷೆ, ಸಾಹಿತ್ಯ ಮತ್ತು ಭಾಷಾ ಕಲಿಕೆ ಶಿಕ್ಷಣದ ಪ್ರಧಾನ ಕಾಳಜಿಯಾಗಿದೆ. ಕಲಿಕೆಯ ಮಾಧ್ಯಮದ ಜೊತೆಗೆ ವೈಯಕ್ತಿಕ, ಸಾಮಾಜಿಕ, ಆಡಳಿತಾತ್ಮಕ, ಔದ್ಯೋಗಿಕ, ವಾಣಿಜ್ಯ ವ್ಯವಹಾರ ನಿರ್ವಹಣೆಗಳ ಮೇಲೆ ಮಹತ್ವವನ್ನು ನೀಡುವುದಾಗಿದೆ. ಇದನ್ನು ಸಾಂದ್ರವಾಗಿ ಮತ್ತು ಹಿತವಾಗಿ ಅಭಿವ್ಯಕ್ತಿಸಬೇಕಾಗಿದೆ. ಸಂವಹನ ಕೌಶಲ್ಯದ ಮೂಲಕ ಅತಿ ಮಹತ್ವದ ಎಲ್ಲ ಬಗೆಯ ಜ್ಞಾನ ತಿಳುವಳಿಕೆ ಹೆಚ್ಚಿಸುವುದರ ಜೊತೆಗೆ ಉಳಿದೆಲ್ಲ ಜ್ಞಾನ ಶಿಸ್ತುಗಳನ್ನು ಜೋಡಿಸುವುದಾಗಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಹಲವು ಹೊಸತನಗಳಿಂದ ಕೂಡಿದೆ. ಬದಲಾಗುತ್ತಿರುವ ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಜಾಗತಿಕ ವಿದ್ಯಮಾನಗಳಿಗೆ ಅನುಗುಣವಾದ ಶಿಕ್ಷಣ ಮಾದರಿಯನ್ನು ರೂಪಿಸುವುದು ಇದರ ಮೂಲ ಉದ್ದೇಶವಾಗಿದೆ. ಸಾಂಪ್ರದಾಯಿಕ ಶಿಕ್ಷಣಕ್ರಮಕ್ಕಿಂತ ಭಿನ್ನ ವಾದ ಶಿಕ್ಷಣ ನೀತಿ ಇದಾಗಿದೆ. ವಿದ್ಯಾರ್ಥಿಗಳನ್ನು ಸಮಕಾಲೀನ ಸವಾಲುಗಳನ್ನು ಎದುರಿಸಲು ಬೇಕಾದ ಸದೃಢ ವ್ಯಕ್ತಿತ್ವಗಳಾಗಿ ರೂಪಿಸುವ ಆಶಯ ಇಲ್ಲಿದೆ. ಕಲಿಕೆ ಮತ್ತು ಫಲಿತಗಳ ನಡುವೆ ಸಮತೋಲನವನ್ನು ಸಾಧಿಸುವುದಕ್ಕೆ ಹೊಸ ಶಿಕ್ಷಣ ನೀತಿಯಲ್ಲಿ ಮಹತ್ವ ನೀಡಲಾಗಿದೆ. ಈ ತನಕದ ವರ್ಗೀಕೃತ ಶಿಕ್ಷಣ ಕ್ರಮದ ಜಾಗದಲ್ಲಿ "ಒಳಗೊಳ್ಳುವ' (Inclusive) ವಿಧಾನವನ್ನು ಅನುಸರಿಸಲಾಗಿದೆ. ಅಂದರೆ ಇಲ್ಲಿಯವರೆಗೆ ಸಮಾನಾಂತರವಾಗಿದ್ದ ಶಿಕ್ಷಣ ಶಿಸ್ತುಗಳು ಈಗ ಪರಸ್ಪರ ಪೂರಕವಾಗಿವೆ. ಕಲೆ ಮತ್ತು ವಿಜ್ಞಾನ, ವಾಣಿಜ್ಯ, ಶುದ್ಧ ಶೈಕ್ಷಣಿಕ ಚಟುವಟಿಕೆಗಳು ವೃತ್ತಿಪರ ಶಿಕ್ಷಣ ಮತ್ತು ಪಠ್ಯೇತರ ಚಟುವಟಿಕೆಗಳು ಈ ಶಿಕ್ಷಣ ನೀತಿಯಲ್ಲಿ ಒಂದೇ ವಿಶಾಲ ಭಿತ್ತಿಯಲ್ಲಿ ಕಾಣಿಸಿಕೊಂಡಿವೆ. ಇದು ಹೊಸ ಶಿಕ್ಷಣ ನೀತಿಯ ಮುಖ್ಯ ಆಶಯವಾಗಿರುವುದು ವಿಶಿಷ್ಟವಾದ ಸಂಗತಿಯಾಗಿದೆ. ಅಲ್ಲದೆ ಬೋಧನೆ ಮತ್ತು ಕಲಿಕೆಯಲ್ಲಿ ಬಹುಭಾಷಿಕತೆಗೆ ಪ್ರೋತ್ಸಾಹ ನೀಡುವ ಬಗೆಗೂ ಹೇಳಿರುವುದು  ಮಹತ್ವದ ಮತ್ತು ಸಮಕಾಲೀನ ಸವಾಲನ್ನು ಎದುರಿಸುವ ವಿಧಾನವೂ ಆಗಿದೆ. ವಿದ್ಯಾರ್ಥಿಗಳು ಶಿಕ್ಷಣ ವ್ಯವಸ್ಥೆಯಲ್ಲಿ ಮುಂದುವರೆಯಲು ಎಲ್ಲ ಬಗೆಯ ಅವಕಾಶಗಳನ್ನು ಮುಕ್ತವಾಗಿರಿಸಲಾಗಿದೆ. ಹೀಗೆ

ಮಾಡುವುದರ ಮೂಲಕ ಶಿಕ್ಷಣದ ಪ್ರತಿ ಹಂತದಲ್ಲೂ ಹೊರಬರುವ ಅವಕಾಶವನ್ನು ಕೊಡುವುದರ ಮೂಲಕ ಅದು ತನ್ನಷ್ಟಕ್ಕೆ ತಾನು ಸ್ವತಂತ್ರ ಹಾಗೂ ಪೂರ್ಣ ಕೋರ್ಸ್ ಆಗಿರುವಂತೆ ರೂಪಿಸಲಾಗಿದೆ.

ಈ ಎಲ್ಲ ಆಶಯಗಳನ್ನು ಸಾಕಾರಗೊಳಿಸಲು ಉನ್ನತ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಸೇರಿದಂತೆ ಮಹಾವಿದ್ಯಾಲಯಗಳು ಪಠ್ಯಕ್ರಮ, ಅಧ್ಯಯನ ಮತ್ತು ಮೌಲ್ಯಮಾಪನ ವಿಷಯಗಳಲ್ಲಿ ಹೊಸತನವನ್ನು ಅಳವಡಿಸಲು, ಅವಕಾಶ ನೀಡಿರುವುದರ ಹಿನ್ನೆಲೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ಅದಕ್ಕೆ ಬದ್ಧವಾಗಿದ್ದು ವಿಶ್ವವಿದ್ಯಾಲಯದ ಸೂಚನೆಗನುಗುಣವಾಗಿ ಪಠ್ಯಕ್ರಮಗಳ ಸಿದ್ಧತೆ ಮತ್ತು ಅಳವಡಿಕೆಗೆ ಹೆಚ್ಚಿನ ಒತ್ತನ್ನು ನೀಡಿದೆ. ಜಾಗತೀಕರಣ ಮತ್ತು ಮಾರುಕಟ್ಟೆ ಆರ್ಥಿಕ ನೀತಿಗಳಿಂದಾಗಿ ದೇಶಿಯ ಭಾಷೆಗಳು ಹಿನ್ನಡೆ ಅನುಭವಿಸುತ್ತಿರುವುದರಿಂದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಶಿಕ್ಷಣವನ್ನು ಅನ್ಯ ಭಾಷೆಗಳ ಅತಿಯಾದ ಅವಲಂಬನೆಯಿಂದ ತಪ್ಪಿಸಿ ಪ್ರಾದೇಶಿಕ ಭಾಷೆಗಳ ಮಾಧ್ಯಮದ ಮೂಲಕ ಕಲಿಸುವುದಕ್ಕೆ ಒತ್ತು ನೀಡುವುದಕ್ಕೆ ಆದ್ಯತೆ ನೀಡಿರುವ ಹಿನ್ನೆಲೆಯಲ್ಲಿ ಕನ್ನಡ ಭಾಷೆಯು ಅದರ ಸಾರ್ಥಕತೆಯನ್ನು ಬಳಸಿಕೊಳ್ಳಲು ಮುಂದಾಗಿದೆ.

ಕಲೆ, ವಿಜ್ಞಾನ. ವಾಣಿಜ್ಯ ಮಾನವಿಕ, ಶಿಕ್ಷಣ, ಕಾನೂನು ಆಯಾ ಜ್ಞಾನ ಶಿಸ್ತುಗಳಲ್ಲಿ ವಿದ್ಯಾರ್ಥಿಗಳು ಜ್ಞಾನ ಪಡೆಯುವುದು ಸರಿಯಷ್ಟೇ ಆಯಾ ಕ್ಷೇತ್ರದ ಜ್ಞಾನ ಶಿಸ್ತುಗಳ ಜ್ಞಾನವು ಸಾಕ್ಷಾತ್ಕಾರಗೊಳ್ಳುವುದು ಭಾಷೆ ಮತ್ತು ಸಾಹಿತ್ಯದಿಂದ ಮಾತ್ರ. ಸಮಾಜದಲ್ಲಿ ಮನುಷ್ಯ ಉತ್ತಮ ನಾಗರಿಕನಾಗಿ ಬದುಕಲು, ಅಗತ್ಯವಾದ ಸಂವೇದನೆಯನ್ನು ಭಾಷೆ ಮತ್ತು ಸಾಹಿತ್ಯ ರೂಪಿಸುತ್ತವೆ. ಭಾಷೆ ಕೇವಲ ಮಾಧ್ಯಮವಾಗಿರದೇ ಅದೊಂದು ಸಂಸ್ಕೃತಿಯಾಗಿರುತ್ತದೆ.

ಬಿ.ಎ. ಬಿ.ಎಸ್‌ಸಿ, ಬಿ.ಕಾಂ. ಬಿ.ಬಿ.ಎ, ಬಿ.ಎಚ್‌ಎಂ, ಬಿಸಿಎ, ಬಿ.ಎಸ್ ಡಬ್ಲುಯು ಮುಂತಾದ ಪದವಿ ಕೋರ್ಸುಗಳ ಮೊದಲ ನಾಲ್ಕು ಸೆಮಿಸ್ಟರ್‌ಗಳಲ್ಲಿ ಭಾಷೆ ಮತ್ತು ಸಾಹಿತ್ಯದ ಬೋಧನೆ ಮಾಡುವಾಗ ವಿಷಯಾಧಾರಿತ ಪಠ್ಯಗಳಿಗೆ ಹೆಚ್ಚಿನ ಆದ್ಯತೆಯನ್ನು ಪಠ್ಯಗಳ ಸಿದ್ಧಪಡಿಸುವಿಕೆಯಲ್ಲಿ ನೀಡಲಾಗಿದೆ. ಆಯಾ ಕೋರ್ಸುಗಳಿಗೆ ಅನುಗುಣವಾಗಿ ಪಠ್ಯ ನಿಗದಿಪಡಿಸುವಾಗ ಮಾನವೀಯ ಮೌಲ್ಯಗಳಿಗೆ ಮತ್ತು ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಸಾಹಿತ್ಯದ ಎಲ್ಲ ಪ್ರಕಾರಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯವನ್ನು ರಚಿಸುವ ಪ್ರಯತ್ನವನ್ನು ಮಾಡಲಾಗಿದೆ.

**ಕನ್ನಡ ಪಠ್ಯಕ್ರಮ ವಿನ್ಯಾಸದ ಆಶಯಗಳು:**

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳಿಗೆ ಅನುಗುಣವಾಗಿ ಕನ್ನಡ ಭಾಷಾ, ಐಚ್ಛಿಕ, ಮುಕ್ತ ಆಯ್ಕೆ ಕನ್ನಡ, ಕನ್ನಡೇತರರಿಗೆ ಕನ್ನಡ ಪಠ್ಯಕ್ರ ಕ್ರಮಗಳ ವಿನ್ಯಾಸವನ್ನು ರೂಪಿಸಲಾಗಿದೆ. ಕರ್ನಾಟಕದಾದ್ಯಂತ ವಿವಿಧ ವಿಶ್ವವಿದ್ಯಾಲಯಗಳು ಈ ತನಕ ಅರ್ಥಪೂರ್ಣವಾದ ಹಾಗೂ ವೈವಿಧ್ಯಮಯ ಪಠ್ಯಕ್ರಮಗಳನ್ನು ಅನುಸರಿಸುತ್ತಾ ಬಂದಿವೆ. ಸಾಹಿತ್ಯದ ಮೂಲಗುಣವಾದ ನಿತ್ಯನೂತನತೆಗೆ ಅನುಗುಣವಾಗಿ ಹೊಸತನವನ್ನು ತರಲು ಪ್ರಯತ್ನಿಸಲಾಗಿದೆ. ಈಗಾಗಲೇ ಬೆಂಗಳೂರು ವಿಶ್ವವಿದ್ಯಾಲಯದಲ್ಲಿಯೇ ಪ್ರಯೋಗಿಸಲ್ಪಟ್ಟು ಯಶಸ್ವಿಯಾಗಿರುವ "ವಿಷಯಾಧಾರಿತ ಪಠ್ಯಕ್ರಮ" (Theme Based)ವನ್ನು ಇಲ್ಲಿ ಸಮರ್ಥವಾಗಿ ಅಳವಡಿಸಿಕೊಳ್ಳಲಾಗಿದೆ. ಈ ಮೂಲಕ ಕಲಿಕೆ ಮತ್ತು ಫಲಿತಗಳ ನಡುವಿನ ಸಮತೋಲನವನ್ನು ಸಾಧಿಸುವುದು ಸಾಧ್ಯವಾಗುತ್ತದೆ. ಶಿಕ್ಷಣವು ವಿದ್ಯಾರ್ಥಿಗಳಿಗೆ ಭಾಷಾ ಕೌಶಲ್ಯ, ಸಾಹಿತ್ಯದ ಮಾನವೀಯ ಸಂವೇದನೆ, ಸಮಕಾಲೀನ ವಿದ್ಯಮಾನಗಳ ಅರಿವು, ಸಂಸ್ಕೃತಿಯ ಬೆಳಕು ಮತ್ತು ರಾಷ್ಟ್ರೀಯತೆಯ ಮನೋಭಾವವನ್ನು ಕಟ್ಟಿಕೊಡುವುದರಲ್ಲಿ ಯಶಸ್ವಿಯಾಗಬೇಕು ಎನ್ನುವ ಹೊಸ ಶಿಕ್ಷಣ ನೀತಿಯ ಆಶಯವನ್ನು ವಿಷಯಾಧಾರಿತ ಪಠ್ಯಕ್ರಮದ ಮೂಲಕ

ಸಾಧಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಉದಾಹರಣೆಗೆ "ನಾಡು- "ನುಡಿ- ಚಿಂತನೆ', "ಸಾಮರಸ್ಯ' ಪರಿಸರ', "ಜಾಗತೀಕರಣ' ಮೊದಲಾದವು ವಿದ್ಯಾರ್ಥಿಗಳಲ್ಲಿ ಉದ್ದೇಶಿತ ಫಲಿತಗಳನ್ನು ನೀಡುತ್ತವೆ. ಹಾಗೆಯೇ ಆಯಾ ಅಧ್ಯಯನ ಶಿಸ್ತುಗಳ ಸ್ವರೂಪಕ್ಕನುಗುಣವಾಗಿ ಒಂದು ಘಟಕವನ್ನು ಸ್ನಾತಕ ಅಧ್ಯಯನ ಮಂಡಳಿಯಲ್ಲಿ ಪರಿಶೀಲಿಸಿ,ರೂಪಿಸಿ ಸಿದ್ಧಪಡಿಸಲಾಗಿದೆ.

ಭಾಷಾ ಪಠ್ಯಗಳನ್ನು ನಾಲ್ಕು ಸೆಮಿಸ್ಟರ್‌ಗಳಲ್ಲಿ ಪ್ರಥಮ ಭಾಷೆಯಾಗಿ ಬೋಧಿಸತಕ್ಕದ್ದು, ಪ್ರತಿ ಸೆಮಿಸ್ಟರ್‌ಗೂ 3 ಕ್ರೆಡಿಟ್‌ಗಳು ಹಾಗೂ ನಾಲ್ಕು ಗಂಟೆ ಬೋಧನಾ ಅವಧಿ ಇರುತ್ತದೆ. ಐಚ್ಛಿಕ ಕನ್ನಡ ಪಠ್ಯಕ್ರಮವನ್ನು ಸಿದ್ಧಪಡಿಸಿದ್ದು ಪ್ರತಿ ಸೆಮಿಸ್ಟರ್‌ಗೂ 3 ಕ್ರೆಡಿಟ್‌ಗಳು ಹಾಗೂ 3 ಗಂಟೆ ಬೋಧನಾ ಅವಧಿ ಇರುತ್ತದೆ. ಪ್ರತಿ ಸೆಮಿಸ್ಟರ್ ಗೆ ಕಡ್ಡಾಯ ಕನ್ನಡ (ಕನ್ನಡೇತರರಿಗೆ ಕನ್ನಡ- ಕನ್ನಡ ಕಲಿಕೆ) ಪಠ್ಯಕ್ರಮವನ್ನು ಒಂದು ಸೆಮಿಸ್ಟರ್ ನಲ್ಲಿ ಬೋಧಿಸುವುದು. ಮುಕ್ತ ಆಯ್ಕೆ ಕನ್ನಡ ಪತ್ರಿಕೆಗೆ( ಕನ್ನಡ ಭಾಷೆ ಮತ್ತು ಐಚ್ಛಿಕ ಕನ್ನಡ) ನಾಲ್ಕು ಪತ್ರಿಕೆಗಳನ್ನು ಸಿದ್ಧಪಡಿಸಲಾಗಿದೆ. ಮುಕ್ತ ಆಯ್ಕೆ ಕನ್ನಡ ಪತ್ರಿಕೆಗಳನ್ನು ಎಲ್ಲ ಅಧ್ಯಯನ ಶಿಸ್ತುಗಳ ವಿದ್ಯಾರ್ಥಿಗಳೂ ನಾಲ್ಕು ಸೆಮಿಸ್ಟರ್‌ಗಳಿಗೂ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ. ವಿದ್ಯಾರ್ಥಿಗಳಿಗೆ ಕಲಿಕೆಯು ಹೆಚ್ಚು ಪ್ರಾಯೋಗಿಕವಾಗಿರುವಂತೆ "ಕ್ರಿಯಾ ಪುಸ್ತಕ' (Work Book)ವನ್ನು ರೂಪಿಸಲು ಅವಕಾಶವನ್ನು ಕಲ್ಪಿಸಿ ಕೊಡಲಾಗಿದೆ.

**1. ಪದವಿ ಕನ್ನಡ ಭಾಷಾ ಪಠ್ಯಗಳು**

1. ಕಲಾ ಕನ್ನಡ (ಬಿ.ಎ. 1 ಮತ್ತು 2ನೆ ಸೆಮ್ ಕನ್ನಡ ಪಠ್ಯ)
2. ಸಮಾಜಕಾರ್ಯ ಕನ್ನಡ (ಬಿಎಸ್ ಡಬ್ಲ್ಯು 1 ಮತ್ತು 2ನೆ ಸೆಮ್ ಕನ್ನಡ ಪಠ್ಯ)
3. ದೃಶ್ಯ ಮತ್ತು ಲಲಿತಕಲಾ ಕನ್ನಡ (ಬಿವಿಎ-ಬಿಎಫ್‌ಎ 1 ಮತ್ತು 2ನೆ ಸೆಮ್ ಕನ್ನಡ ಪಠ್ಯ)
4. ವಿಜ್ಞಾನ ಕನ್ನಡ (ಬಿಎಸ್ಸಿ 1 ಮತ್ತು 2ನೆ ಸೆಮ್ ಕನ್ನಡ ಪಠ್ಯ)
5. ವಿನ್ಯಾಸ ಕನ್ನಡ (ಬಿಎಸ್ಸಿ ಫ್ಯಾಡ್ 1 ಮತ್ತು 2ನೆ ಸೆಮ್ ಕನ್ನಡ ಪಠ್ಯ)
6. ಗಣಕ ಕನ್ನಡ (ಬಿಸಿಎ 1 ಮತ್ತು 2ನೆ ಸೆಮ್ ಕನ್ನಡ ಪಠ್ಯ)
7. ಒಳಾಂಗಣ ವಿನ್ಯಾಸ ಕನ್ನಡ (ಬಿಎಸ್ಸಿ ಇಂಟೀರಿಯರ್ ಡಿಸೈನ್ ಅಂಡ್ ಡೆಕೋರೇಶನ್)
8. ವಾಣಿಜ್ಯ ಕನ್ನಡ (ಬಿಕಾಂ 1 ಮತ್ತು 2ನೆ ಸೆಮ್ ಕನ್ನಡ ಪಠ್ಯ)
9. ವ್ಯವಹಾರ ನಿರ್ವಹಣ ಕನ್ನಡ (ಬಿಬಿಎ 1 ಮತ್ತು 2ನೆ ಸೆಮ್ ಕನ್ನಡ ಪಠ್ಯ)
10. ಆತಿಥ್ಯ ನಿರ್ವಹಣ ಕನ್ನಡ (ಬಿಎಚ್‌ಎಮ್ 1 ಮತ್ತು 2ನೆ ಸೆಮ್ ಕನ್ನಡ ಪಠ್ಯ)
11. ವಾಯುಯಾನ ನಿರ್ವಹಣ ಕನ್ನಡ (ಬಿಬಿಎ ಏವಿಯೇಶನ್ 1 ಮತ್ತು 2ನೆ ಸೆಮ್ ಕನ್ನಡ ಪಠ್ಯ)

**2. ಐಚ್ಛಿಕ ಕನ್ನಡ**

ಪ್ರಥಮ ಸೆಮಿಸ್ಟರ್ ಐಚ್ಛಿಕ ಪಠ್ಯ

1. Paper: A– 1 ಸಾಹಿತ್ಯ ಕಲ್ಪತರು 1
2. Paper A– 2 ಸಾಹಿತ್ಯ ಕಲ್ಪತರು 2

ಎರಡನೆ ಸೆಮಿಸ್ಟರ್ ಕನ್ನಡ ಐಚ್ಛಿಕ ಪತ್ರ

3. Paper A–3 ಸಾಹಿತ್ಯ ಕಲ್ಪತರು 3
4. Paper A–4 ಸಾಹಿತ್ಯ ಕಲ್ಪತರು 4

**3. ಮುಕ್ತ ಆಯ್ಕೆ**

ಪ್ರಥಮ ಸೆಮಿಸ್ಟರ್

1. ಕನ್ನಡ ವ್ಯಾಕರಣ.
2. ಆತ್ಮಚರಿತ್ರೆಗಳು.
3. ಕನ್ನಡ ವಿಚಾರ ಸಾಹಿತ್ಯ – 1

ಎರಡನೆ ಸೆಮಿಸ್ಟರ್:

1. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ
2. ಅನುವಾದ ಸಾಹಿತ್ಯ
3. ವಿಚಾರ ಸಾಹಿತ್ಯ–2

**4. ಕಡ್ಡಾಯ ಕನ್ನಡ (ಕನ್ನಡೇತರರಿಗೆ ಕನ್ನಡ–ಕನ್ನಡ ಕಲಿ)**

ಕನ್ನಡ ಕಲಿಕೆ 1

## Course Articulation Matrix: Mapping of Course Outcomes (COs) with Program Outcomes (POs 1–12)

| Course Outcomes (COs) / | 1 ಬಿ.ಎ | 2 ಬಿ.ಎ ಸ್.ಡ ಬ್ಲ್ಯು | 3 ಬಿ.ವಿ.ಎ / | 4 ಬಿ.ಎಸ್ಸಿ | 5 ಬಿ.ಸಿ. ಎ | 6 ಬಿ.ಎಸ್ಸಿ (ಫ್ಯಾ ಡ್) | 7 ಬಿ.ಎಸ್ಸಿ (IDD ) | 8 ಬಿ. ಕಾಂ | 9 ಬಿ.ಬಿ. ಎ | 10 ಬಿ.ಎ ಚ್. ಎಂ | 11 ಬಿ.ಬಿ. ಎ | 12 ಐ ಚ್ಛಿಕ | 13 ಮುಕ್ತ ಆ ಯ್ಕೆ | 14 ಕಡ್ಡಾ ಯ |
|---|---|---|---|---|---|---|---|---|---|---|---|---|---|---|

| Program Outcomes (POs) | | | ಬಿ.ಎಫ್.ಎ | | | | | | ಬಿ.ಬಿ.ಎಂ | | ಏವಿಯೇಷನ್ | ಕನ್ನಡ | ಕನ್ನಡ | ಕನ್ನಡ (ಕನ್ನಡೇತರರಿಗೆ ಕನ್ನಡ ಕಲಿ) |
|---|---|---|---|---|---|---|---|---|---|---|---|---|---|---|
| 1 ವಿವಿಧ ಬರಹಗಾರರು, ಸಾಹಿತ್ಯ ಕೃತಿಗಳು ಮತ್ತು ಸಾಹಿತ್ಯ ಚಳುವಳಿಗಳ ಅರಿವು ಹೆಚ್ಚಿಸಿಕೊಳ್ಳುವುದು. | ✓ | ✓ | ✓ | | ✓ | | | ✓ | | | ✓ | ✓ | | ✓ |
| 2. ವಿವಿಧ ಸಾಹಿತ್ಯ ಪ್ರಕಾರಗಳ ರೂಪ–ಸ್ವರೂಪಗಳ ಬಗೆಗೆ ತಿಳುವಳಿಕೆ ಪಡೆಯುವುದು. | | ✓ | | ✓ | | ✓ | | ✓ | | | ✓ | | ✓ | ✓ |
| 3. ಭಾಷೆ–ಸಾಹಿತ್ಯದ | ✓ | ✓ | ✓ | | ✓ | | ✓ | ✓ | | ✓ | ✓ | | ✓ | |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ಶ್ರೀಮಂತಿಕೆಯ ಜೊತೆಗೆ ಮಾನವೀಯ ಮೌಲ್ಯಗಳನ್ನು ಮೂಡಿಸಿಕೊಳ್ಳುವುದು. | | | | | | | | | | | | | | |
| 4. ಸಾಹಿತ್ಯ ಮೂಲಕ ಸಮಾಜೋ, ಧಾರ್ಮಿಕ, ರಾಜಕೀಯ, ಸಾಂಸ್ಕೃತಿಕ ತಿಳುವಳಿಕೆಯನ್ನು ಹೊಂದುವುದು. | ✓ | ✓ | ✓ | ✓ | | ✓ | ✓ | ✓ | ✓ | | ✓ | | | ✓ |
| 5. ವೈಚಾರಿಕ–ವೈಜ್ಞಾನಿಕ ಚಿಂತನೆಗಳನ್ನು ಅಳವಡಿಸಿಕೊಳ್ಳುವುದು. | ✓ | ✓ | ✓ | ✓ | | ✓ | ✓ | ✓ | | ✓ | | ✓ | | ✓ |
| 6. ಭಾಷಾ ಕೌಶಲ್ಯವನ್ನು ಬೆಳೆಸಿಕೊಳ್ಳುವುದು. | ✓ | | ✓ | | ✓ | ✓ | ✓ | ✓ | | ✓ | | | ✓ | |
| 7. ಸಾಹಿತ್ಯದ ಓದು, | ✓ | ✓ | | ✓ | | ✓ | | ✓ | ✓ | | ✓ | | | ✓ |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| ತಿಳುವಳಿಕೆ ಹಾಗೂ ಬರವಣಿಗೆಯನ್ನು ರೂಢಿಸಿಕೊಳ್ಳುವುದು. | | | | | | | | | | | | | | |
| 8. ನಾಡು–ನುಡಿಯನ್ನು ಕುರಿತ ಅರಿವನ್ನು ಹೆಚ್ಚಿಸಿಕೊಳ್ಳುವುದು. | ✓ | ✓ | ✓ | | | ✓ | | ✓ | | ✓ | | ✓ | | |
| 9, ಸಮಕಾಲೀನ ವಿದ್ಯಮಾನಗಳ ಅರಿವು | ✓ | ✓ | ✓ | ✓ | | ✓ | ✓ | | | ✓ | ✓ | | | ✓ |
| 10. ಸಾಮಾಜಿಕ ಹೊಣೆಗಾರಿಕೆಯ ಅರಿವು. | ✓ | ✓ | | ✓ | | ✓ | | ✓ | | ✓ | | | ✓ | |
| 11. ಸದೃಢ ಬೌದ್ಧಿಕ ವ್ಯಕ್ತಿತ್ವ ನಿರ್ಮಾಣ. | ✓ | | ✓ | ✓ | ✓ | | ✓ | | ✓ | | ✓ | | | ✓ |

**ಆಂತರಿಕ ಮೌಲ್ಯಮಾಪನ ಮತ್ತು ಸೆಮಿಸ್ಟರ್ ಕೊನೆಯ ಲಿಖಿತ ಪರೀಕ್ಷಾ ವಿಧಾನದ ಸಲಹೆ ಮತ್ತು ಮಾದರಿ:**

ಈ ಸಮಿತಿಯು ಆಂತರಿಕ (ಸಿಐಇ) ಹಾಗು ಸೆಮಿಸ್ಟರ್ ಕೊನೆಯ ಲಿಖಿತ ಪರೀಕ್ಷೆ (ಎಸ್ ಇಇ)ಗಳ ವಿಧಾನವನ್ನು ಕುರಿತಂತೆ ಈ ಕೆಳಗಿನ ಸಲಹೆ ನೀಡಲು ಬಯಸುತ್ತದೆ. ಪಠ್ಯ ಚೌಕಟ್ಟು ಸಮಿತಿ ಸೂಚನೆಯಂತೆ ಆಂತರಿಕ (ಸಿಐಇ) ಮೌಲ್ಯಮಾಪನವು

ಶೇ.40ಅಂಕಗಳನ್ನು ಹಾಗು ಸೆಮಿಸ್ಟರ್ ಕೊನೆಯ ಪರೀಕ್ಷೆಯು (ಎಸ್‌ಇ) ಶೇ.40 ಅಂಕಗಳ ನಿಯಮವನ್ನು ಈ ಕೆಳಗಿನ ಮಾನದಂಡಗಳನ್ನು ಅನುಸರಿಸಿ ಮಾಪನ ಮಾಡಲು ಸೂಚಿಸುತ್ತದೆ.

| ಕ್ರ.ಸಂ | ಪರೀಕ್ಷಾ ಮಾನದಂಡಗಳು | ಅಂಕಗಳು |
|---|---|---|
| | ಆಂತರಿಕ ನಿರಂತರ ಮೌಲ್ಯಮಾಪನ (ಸಿಐಇ) | |
| 1 | ನಿರಂತರ ಮತ್ತು ಸಮಗ್ರ ಮೌಲ್ಯಮಾಪನ (ಸಿಸಿಇ) | 10 |
| 2 | ಆಂತರಿಕ ಮೌಲ್ಯಮಾಪನ ಪರೀಕ್ಷೆಗಳು | 20 |
| 3 | ನಿರಂತರ ಕಲಿಕಾ ಚಟುವಟಿಕೆ | 10 |
| | ಒಟ್ಟು ಸಿಐಇ(1+2+3) | 40 |
| 3 | ಸೆಮಿಸ್ಟರ್ ಅಂತ್ಯದ ಪರೀಕ್ಷೆ (ಎಸ್‌ಇಇ) | 60 |
| | ಒಟ್ಟು (ಸಿಐಇ ಮತ್ತು ಎಎಸ್‌ಇಇ)= | 100 |

**ಆಂತರಿಕ ಮತ್ತು ಸಮಗ್ರ ಮೌಲ್ಯಮಾಪನ (ಸಿಸಿಇ) :**

ಈ ವಿಧಾನಕ್ಕೆ 10 ಅಂಕಗಳನ್ನು ನಿಗದಿಪಡಿಸಿದ್ದು ತರಗತಿಯೊಳಗಿನ ವಿದ್ಯಾರ್ಥಿಯ ಸಕ್ರಿಯ ಭಾಗವಹಿಸುವಿಕೆ ಮತ್ತು ವ್ಯಕ್ತಿಗತ ಅಸೈನ್‌ಮೆಂಟ್‌ಗಳು ಹಾಗು ಗುಂಪು ಚರ್ಚೆ (5 ಅಂಕಗಳು) ಮತ್ತು ಹಾಜರಾತಿ (5 ಅಂಕಗಳು) ಅಥವಾ ಇತರೆ ಯಾವುದೇ ಮಾನದಂಡಗಳನ್ನು ರೂಪಿಸಿಕೊಳ್ಳಬಹುದು.

**ಆಂತರಿಕ ಮೌಲ್ಯಮಾಪನ ಪರೀಕ್ಷೆಗಳು (ಐಎಟಿ):**

ಈ ಭಾಗದಲ್ಲಿ ಒಂದು ಸೆಮಿಸ್ಟರ್ ಅವಧಿಗೆ ಎರಡು ಆಂತರಿಕ ಪರೀಕ್ಷೆಗಳನ್ನು ನಡೆಸುವುದು. ಪ್ರತಿ ಪರೀಕ್ಷೆಯನ್ನು 25+ 25 ಅಂಕಗಳಿಗೆ ಏರ್ಪಡಿಸಿ ಇವುಗಳನ್ನು 10+ 10 ಅಂಕಗಳಿಗೆ ಸಮೀಕರಿಸಿಕೊಳ್ಳುವುದು ಅಥವಾ ಬೇರೆ ಯಾವುದೇ ಮಾನದಂಡಗಳ ಮೂಲಕ ಆಂತರಿಕ ಪರೀಕ್ಷೆಗಳನ್ನು ನಡೆಸಬಹುದು.

ನಿರಂತರ ಕಲಿಕಾ ಚಟುವಟಿಕೆಗಳನ್ನು 10 ಅಂಕಗಳಿಗೆ ಸಮೀಕರಿಸಿಕೊಳ್ಳುವುದು

**ಸೆಮಿಸ್ಟರ್ ಅಂತ್ಯದ ಪರೀಕ್ಷೆ (ಎಸ್‌ಇಇ):**

ಈ ವಿಧಾನವು 60 ಅಂಕಗಳ ಲಿಖಿತ ಪರೀಕ್ಷೆಗಳಿಂದ ಕೂಡಿರುತ್ತದೆ. ಈ ಪರೀಕ್ಷೆಯು ಆಯಾ ವಿಶ್ವವಿದ್ಯಾಲಯಗಳು ಹಾಗು ಅಟಾನಮಸ್‌ಕಾಲೇಜುಗಳ ಪರೀಕ್ಷಾ ನಿಯಮಾನುಸಾರ ನಡೆಯುವುದರಿಂದ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ಪರೀಕ್ಷಾ ಅರ್ಹತೆಗಳನ್ನು ವಿದ್ಯಾರ್ಥಿಯು ಪರಿಪೂರ್ಣಗೊಳಿಸಬೇಕು. ನಂತರ ಆಯಾ ವಿಶ್ವವಿದ್ಯಾಲಯಗಳ ಬಿಓಎಸ್‌ಗಳು, ಬಿಓಇ ಸದಸ್ಯರು ರೂಪಿಸುವ ಮಾನದಂಡಗಳಂತೆ ಪರೀಕ್ಷೆ ನಡೆಯಲಿದೆ.

**ಅ. ಭಾಷಾ ಕನ್ನಡ ಪಠ್ಯ ಚೌಕಟ್ಟು;**

**1. ಬಿ.ಎ–ಕನ್ನಡ ಭಾಷಾ ಪಠ್ಯ.**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು ವಾರಕ್ಕೆ 04 ಗಂಟೆಗಳು (ಒಟ್ಟು 52–56 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L–1 | ಕನ್ನಡ ನಾಡು–ನುಡಿ–ಚಿಂತನೆ 15 ಗಂಟೆಗಳು | ಪ್ರಕೃತಿ 15 ಗಂಟೆಗಳು | ಬಾಲ್ಯ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L–2 | ಜಾಗತೀಕರಣ 15 ಗಂಟೆಗಳು | ಸಮಾಜ 15 ಗಂಟೆಗಳು | ಪ್ರೀತಿ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

**2. ಬಿ.ಎಸ್.ಡಬ್ಲ್ಯೂ–ಕನ್ನಡ ಭಾಷಾ ಪಠ್ಯ.**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು ವಾರಕ್ಕೆ 04 ಗಂಟೆಗಳು (ಒಟ್ಟು 52–56 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L–1 | ಕನ್ನಡ ನಾಡು–ನುಡಿ–ಚಿಂತನೆ 15 ಗಂಟೆಗಳು | ಪ್ರಕೃತಿ 15 ಗಂಟೆಗಳು | ಬಾಲ್ಯ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L–2 | ಜಾಗತೀಕರಣ 15 ಗಂಟೆಗಳು | ಸಮಾಜ 15 ಗಂಟೆಗಳು | ಪ್ರೀತಿ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

**3. ಬಿ.ವಿ.ಎ/ಬಿ.ಎಫ್.ಎ – ಕನ್ನಡ ಭಾಷಾ ಪಠ್ಯ**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು ವಾರಕ್ಕೆ 04 ಗಂಟೆಗಳು (ಒಟ್ಟು 52–**56** ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್ L–1 | ಕನ್ನಡ ನಾಡು–ನುಡಿ–ಚಿಂತನೆ | ಪ್ರಕೃತಿ 15 ಗಂಟೆಗಳು | ವೈಜ್ಞಾನಿಕ ಮನೋಧರ್ಮ | ಸಂಕೀರ್ಣ 13 ಗಂಟೆಗಳು |

| | | | | |
|---|---|---|---|---|
| | 15 ಗಂಟೆಗಳು | | 13 ಗಂಟೆಗಳು | |
| ಎರಡನೇ ಸೆಮಿಸ್ಟರ್<br>L–2 | ಜಾಗತೀಕರಣ<br>15 ಗಂಟೆಗಳು | ಪ್ರೀತಿ<br>15 ಗಂಟೆಗಳು | ದೇಶೀಯತೆ<br>13 ಗಂಟೆಗಳು | ಕಲೆ ಮತ್ತು ಜೀವನ<br>13 ಗಂಟೆಗಳು |

**4. ಬಿ.ಎಸ್ಸಿ–ಕನ್ನಡ ಭಾಷಾ ಪತ್ಯ.**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1.2,3,4 ಸೆಮಿಸ್ಟರ್‌ಗಳು.
ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು ವಾರಕ್ಕೆ 04 ಗಂಟೆಗಳು (ಒಟ್ಟು 52–56 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್<br>L–1 | ಕನ್ನಡ ನಾಡು–<br>ನುಡಿ– ಚಿಂತನೆ<br>15 ಗಂಟೆಗಳು | ಭೂಮಿ<br>15 ಗಂಟೆಗಳು | ವೈಜ್ಞಾನಿಕ<br>ಮನೋಧರ್ಮ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |
| ಎರಡನೇ ಸೆಮಿಸ್ಟರ್<br>L–2 | ಜೀವನ ಕಲೆ<br>15 ಗಂಟೆಗಳು | ಕನಸು<br>15 ಗಂಟೆಗಳು | ಮಳೆ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |

**5. ಬಿ.ಸಿ.ಎ–ಕನ್ನಡ ಭಾಷಾ ಪತ್ಯ.**

ಪತ್ಯ ಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1.2,34 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು ವಾರಕ್ಕೆ ವಾರಕ್ಕೆ 04 ಗಂಟೆಗಳು (ಒಟ್ಟು 52–**56** ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್<br>L–1 | ಕನ್ನಡ ನಾಡು–<br>ನುಡಿ– ಚಿಂತನೆ<br>15 ಗಂಟೆಗಳು | ಆಕಾಶ<br>15 ಗಂಟೆಗಳು | ತಾರುಣ್ಯ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |
| ಎರಡನೇ ಸೆಮಿಸ್ಟರ್<br>L–2 | ವಾಣಿಜ್ಯ<br>15 ಗಂಟೆಗಳು | ತಂತ್ರಜ್ಞಾನ<br>15 ಗಂಟೆಗಳು | ದಾಂಪತ್ಯ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |

**6. ಬಿ.ಎಸ್ಸಿ (FAD)–ಕನ್ನಡ ಭಾಷಾ ಪತ್ಯ**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು ವಾರಕ್ಕೆ 04 ಗಂಟೆಗಳು (ಒಟ್ಟು 52 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್<br>L–1 | ಕನ್ನಡ ನಾಡು–<br>ನುಡಿ– ಚಿಂತನೆ<br>15 ಗಂಟೆಗಳು | ಸೌಂದರ್ಯ<br>15 ಗಂಟೆಗಳು | ಒಲುಮೆ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |
| ಎರಡನೇ ಸೆಮಿಸ್ಟರ್<br>L–2 | ಮಾರುಕಟ್ಟೆ<br>15 ಗಂಟೆಗಳು | ಪರಿಸರ<br>15 ಗಂಟೆಗಳು | ಅಂತಃಕರಣ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |

**7. ಬಿ.ಎಸ್ಸಿ – ಒಳಾಂಗಣ ವಿನ್ಯಾಸ ಮತ್ತು ಅಲಂಕಾರ (IDD)– ಕನ್ನಡ ಭಾಷಾ ಪತ್ಯ**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು 04(ಒಟ್ಟು 52–**56** ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್<br>L–1 | ಕನ್ನಡ ನಾಡು–<br>ನುಡಿ– ಚಿಂತನೆ<br>15 ಗಂಟೆಗಳು | ಸೌಂದರ್ಯ<br>15 ಗಂಟೆಗಳು | ಒಲುಮೆ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |
| ಎರಡನೇ ಸೆಮಿಸ್ಟರ್<br>L–2 | ಮಾರುಕಟ್ಟೆ<br>15 ಗಂಟೆಗಳು | ಪರಿಸರ<br>15 ಗಂಟೆಗಳು | ಅಂತಃಕರಣ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |

**8. ಬಿ.ಕಾಂ–ಕನ್ನಡ ಭಾಷಾ ಪತ್ಯ.**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1.2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು ವಾರಕ್ಕೆ 04 ಗಂಟೆಗಳು (ಒಟ್ಟು 52–56 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್<br>L–1 | ಕನ್ನಡ ನಾಡು–ನುಡಿ–<br>ಚಿಂತನೆ<br>15 ಗಂಟೆಗಳು | ಸಂಸ್ಕೃತಿ<br>15 ಗಂಟೆಗಳು | ಜಾಗತೀಕರಣ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |
| ಎರಡನೇ ಸೆಮಿಸ್ಟರ್<br>L–2 | ಸೌಂದರ್ಯ<br>15 ಗಂಟೆಗಳು | ಭಕ್ತಿ<br>15 ಗಂಟೆಗಳು | ದೇಸಿಯತೆ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |

**9. ಬಿ.ಬಿ.ಎ–ಕನ್ನಡ ಭಾಷಾ ಪತ್ಯ.**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು ವಾರಕ್ಕೆ 04 ಗಂಟೆಗಳು (ಒಟ್ಟು 52–56 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್<br>L–1 | ಕನ್ನಡ ನಾಡು–<br>ನುಡಿ– ಚಿಂತನೆ<br>15 ಗಂಟೆಗಳು | ಆಧುನಿಕತೆ<br>15 ಗಂಟೆಗಳು | ಕುಟುಂಬ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |
| ಎರಡನೇ ಸೆಮಿಸ್ಟರ್<br>L–2 | ಕಾಯಕ<br>15 ಗಂಟೆಗಳು | ಸಾಮರಸ್ಯ<br>15 ಗಂಟೆಗಳು | ಅಂತಃಕರಣ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |

**10. ಬಿ.ಹೆಚ್.ಎಂ –ಕನ್ನಡ ಭಾಷಾ ಪತ್ಯ.**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1,2,3,4 ಸೆಮಿಸ್ಟರ್‌ಗಳು.

**ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು ವಾರಕ್ಕೆ** ವಾರಕ್ಕೆ 04 ಗಂಟೆಗಳು **(ಒಟ್ಟು 52–56 ಗಂಟೆಗಳು)**

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|
| ಪ್ರಥಮ ಸೆಮಿಸ್ಟರ್<br>L–1 | ಕನ್ನಡ ನಾಡು–<br>ನುಡಿ– ಚಿಂತನೆ<br>15 ಗಂಟೆಗಳು | ಪ್ರಕೃತಿ–ಮನುಷ್ಯ<br>15 ಗಂಟೆಗಳು | ವೈಜ್ಞಾನಿಕತೆ/ವೈಚಾರಿಕತೆ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |
| ಎರಡನೇ ಸೆಮಿಸ್ಟರ್<br>L–2 | ಜಾಗತೀಕರಣ<br>15 ಗಂಟೆಗಳು | ಸಮಾಜ<br>15 ಗಂಟೆಗಳು | ಪ್ರೀತಿ<br>13 ಗಂಟೆಗಳು | ಸಂಕೀರ್ಣ<br>13 ಗಂಟೆಗಳು |

11. **ಬಿ.ಬಿ.ಎ ಏವಿಯೇಷನ್ –ಕನ್ನಡ ಭಾಷಾ ಪತ್ಯ.**

ಪಠ್ಯಪುಸ್ತಕಗಳ ಶೀರ್ಷಿಕೆಯನ್ನು ಆಯಾ ವಿಶ್ವವಿದ್ಯಾಲಯದ ಅಧ್ಯಯನದ ಮಂಡಳಿ ನಿರ್ಧರಿಸುವುದು–1,2,3,4 ಸೆಮಿಸ್ಟರ್‌ಗಳು.

ಪ್ರತಿ ಸೆಮಿಸ್ಟರ್ ಕ್ರೆಡಿಟ್ 03, ಪ್ರತಿ ಸೆಮಿಸ್ಟರ್ ತರಗತಿಗಳು ವಾರಕ್ಕೆ 04 ಗಂಟೆಗಳು (ಒಟ್ಟು 52–56 ಗಂಟೆಗಳು)

| ಸೆಮಿಸ್ಟರ್ | ಘಟಕ–1 | ಘಟಕ–2 | ಘಟಕ–3 | ಘಟಕ–4 |
|---|---|---|---|---|

| | | | | |
|---|---|---|---|---|
| ಪ್ರಥಮ ಸೆಮಿಸ್ಟರ್ L–1 | ಕನ್ನಡ ನಾಡು– ನುಡಿ– ಚಿಂತನೆ 15 ಗಂಟೆಗಳು | ಆಧುನಿಕತೆ 15 ಗಂಟೆಗಳು | ಕುಟುಂಬ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |
| ಎರಡನೇ ಸೆಮಿಸ್ಟರ್ L–2 | ಕಾಯಕ 15 ಗಂಟೆಗಳು | ಸಾಮರಸ್ಯ 15 ಗಂಟೆಗಳು | ಅಂತಃಕರಣ 13 ಗಂಟೆಗಳು | ಸಂಕೀರ್ಣ 13 ಗಂಟೆಗಳು |

**2. ಐಚ್ಛಿಕ ಕನ್ನಡ ಪಠ್ಯ ವಿನ್ಯಾಸ**

**1 ರಿಂದ 2 ಸೆಮಿಸ್ಟರ್‌ಗಳು.**

| | | |
|---|---|---|
| ಪ್ರಥಮ ಸೆಮಿಸ್ಟರ್ | A––1 ಪತ್ರಿಕೆ–1 | ಪ್ರಾಚೀನ ಕನ್ನಡ ಸಾಹಿತ್ಯ ಚರಿತ್ರೆ (ಆರಂಭದಿಂದ ಹತ್ತನೇ ಶತಮಾನದವರೆಗೆ) (ಕ್ರೆಡಿಟ್ 03) ಬೋಧನಾ ಅವಧಿ ವಾರಕ್ಕೆ 3 ಗಂಟೆಗಳು |
| | A –2 ಪತ್ರಿಕೆ–2 | ಮಧ್ಯಕಾಲೀನ ಕನ್ನಡ ಸಾಹಿತ್ಯ ಚರಿತ್ರೆ (ಹನ್ನೊಂದನೇ ಶತಮಾನದಿಂದ ಹದಿನಾರನೇ ಸೆಮಿಸ್ಟರ್ ಪತ್ರಿಕೆ–2 ಶತಮಾನ) (ಕ್ರೆಡಿಟ್ 03) ಬೋಧನಾ ಅವಧಿ ವಾರಕ್ಕೆ 3 ಗಂಟೆಗಳು |
| ಎರಡನೇ ಸೆಮಿಸ್ಟರ್ | A –3 ಪತ್ರಿಕೆ–3 | ಆಧುನಿಕಪೂರ್ವ ಕನ್ನಡ ಸಾಹಿತ್ಯ ಚರಿತ್ರೆ (11 ನೇ ಶತಮಾನದಿಂದ 16ರ ವರೆಗೆ) (ಕ್ರೆಡಿಟ್ 03) ಬೋಧನಾ ಅವಧಿ ವಾರಕ್ಕೆ 3 ಗಂಟೆಗಳು |
| | A –4 ಪತ್ರಿಕೆ–4 | ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ (20ನೇ ಶತಮಾನದಿಂದ ಮುಂದೆ) (ಕ್ರೆಡಿಟ್ 03) ಬೋಧನಾ ಅವಧಿ ವಾರಕ್ಕೆ 3 ಗಂಟೆಗಳು |

**3. ಮುಕ್ತ ಆಯ್ಕೆ ಪತ್ರಿಕೆಯ ಕನ್ನಡ ಪಠ್ಯ ಚೌಕಟ್ಟು (OE)**

| ಸೆಮಿಸ್ಟರ್ | |
|---|---|
| ಪ್ರಥಮ ಸೆಮಿಸ್ಟರ್ (ಕ್ರೆಡಿಟ್ 03) OE–1–1 | **ಪತ್ರಿಕೆ 1.1: ಸೆಮಿಸ್ಟರ್ 1: ಕನ್ನಡ ವ್ಯಾಕರಣ.** |
| (ಕ್ರೆಡಿಟ್ 03) OE–1–2 | ಪತ್ರಿಕೆ **1.2– ಸೆಮಿಸ್ಟರ್ 2 – ಆತ್ಮಚರಿತ್ರೆಗಳು.** |
| (ಕ್ರೆಡಿಟ್ 03) OE–1–3 | ಪತ್ರಿಕೆ **1.3 ಕನ್ನಡ ವಿಚಾರ ಸಾಹಿತ್ಯ–1** |
| ಎರಡನೇ ಸೆಮಿಸ್ಟರ್ (ಕ್ರೆಡಿಟ್ 03) OE–2–1 | **ಪತ್ರಿಕೆ 2.1: 2ನೆ ಸೆಮ್ – ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ** |

| | |
|---|---|
| (ಕ್ರೆಡಿಟ್ 03)OE–2–2 | **ಪತ್ರಿಕೆ 2.2: 2ನೆ ಸೆಮ್ – ಅನುವಾದ ಸಾಹಿತ್ಯ** |
| (ಕ್ರೆಡಿಟ್ 03)OE–2–3 | **ಪತ್ರಿಕೆ 2.3: 2ನೆ ಸೆಮ್ – ಕನ್ನಡ ವಿಚಾರ ಸಾಹಿತ್ಯ–2** |

**4. ಕಡ್ಡಾಯ ಕನ್ನಡ (ಕನ್ನಡೇತರರಿಗೆ ಕನ್ನಡ) FUNCTIONAL KANNADA**

| | |
|---|---|
| **ಕಡ್ಡಾಯ ಕನ್ನಡ: ಕನ್ನಡೇತರರಿಗೆ ಕನ್ನಡ:** | **ಪ್ರಥಮ ಸೆಮಿಸ್ಟರ್: ಕನ್ನಡ ಕಲಿಕೆ** |
| **ಕ್ರೆಡಿಟ್ 03,ಬೋಧನಾ ಅವಧಿ ವಾರಕ್ಕೆ 04 ಗಂಟೆಗಳು** | |

ಕನ್ನಡ ಕಲಿಕೆ –1

**ರಾಷ್ಟ್ರೀಯ ಶಿಕ್ಷಣ ನೀತಿ – 2020**

**ಕನ್ನಡ ಭಾಷಾ ಪಠ್ಯ ಸ್ವರೂಪ (ಪ್ರಥಮ ಭಾಷೆ–ಕಡ್ಡಾಯ ಕನ್ನಡ)**

**ಕೋರ್ಸ್‌ವಾರು ಕನ್ನಡ ಭಾಷಾ ಪಠ್ಯಕ್ರಮ:**

ಶೈಕ್ಷಣಿಕ ವ್ಯವಸ್ಥೆಯಲ್ಲಿ ಭಾಷಾ ಪಠ್ಯಗಳು ಮತ್ತು ಭಾಷಾ ಅಧ್ಯಾಪಕರ ಜವಾಬ್ದಾರಿ ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಹಲವು ಬಗೆಯ ಬಿಕ್ಕಟ್ಟುಗಳು ಮತ್ತು ವಿಷಮತೆಗಳು ಹೆಚ್ಚುತ್ತಿರುವ ಈ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳನ್ನು ಪ್ರಜ್ಞಾವಂತರನ್ನಾಗಿ, ಸಂವೇದನಾಶೀಲರನ್ನಾಗಿ ಮಾಡುವ ಅವಕಾಶ ಭಾಷಾ ಪಠ್ಯಗಳಲ್ಲಿ ಇರುತ್ತದೆ. ಆ ಅವಕಾಶವನ್ನು ಎಂದಿನಿಂದಲೂ ಭಾಷಾ ಪಠ್ಯ ಮಂಡಳಿಗಳು ಆಸ್ಥೆಯಿಂದ ನಿಭಾಯಿಸುತ್ತಲೇ ಬಂದಿವೆ.

ಹೊಸ ಶಿಕ್ಷಣ ನೀತಿಯ ಅನುಷ್ಠಾನದ ಹಿನ್ನೆಲೆಯಲ್ಲಿ ರಚಿಸಲಾದ ಸಮಿತಿಯು ಇದನ್ನೇ ಬುನಾದಿಯಾಗಿಸಿಕೊಂಡು ಪಠ್ಯಕ್ರಮವನ್ನು ಕುರಿತ ನಕಾಶೆಯನ್ನು ರಚಿಸಿದೆ.ಕನ್ನಡವನ್ನು "ಜ್ಞಾನದ ಭಾಷೆಯಾಗಿ ವಿದ್ಯಾರ್ಥಿಗಳಿಗೆ ನೀಡಬೇಕೆನ್ನುವುದು ಅಧ್ಯಯನ ಮಂಡಳಿಯ ಆಶಯ. "ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಈ ಅಂಶವನ್ನೇ ಉದ್ಯೋಗ ಮತ್ತು ಕೌಶಲ್ಯಗಳು ಶಿಕ್ಷಣದ ಮುಖ್ಯ ಗುರಿ ಎಂದು ಹೇಳಿದೆ. ಹೀಗಾಗಿ ತಾಯಿ ಭಾಷೆ ಕನ್ನಡದ ಮೂಲಕ ವಿದ್ಯಾರ್ಥಿಗಳು ಸ್ಥಳೀಯ, ರಾಷ್ಟ್ರೀಯ ಮತ್ತು ಜಾಗತೀಕ ಸವಾಲುಗಳನ್ನು ಸನ್ನದ್ಧರಾಗುವ ಬಗೆಯಲ್ಲಿ ಪಠ್ಯಕ್ರಮದ ವಿನ್ಯಾಸವನ್ನು ರೂಪಿಸಲಾಗಿದೆ. ಜಾಗತೀಕರಣವೂ ಸೇರಿದಂತೆ ಹಲವು ವಿದ್ಯಮಾನಗಳು ನಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶಗಳನ್ನು,ಸಮೀಕರಣಗಳನ್ನು, ಗ್ರಹಿಕೆಗಳನ್ನು ಆಳವಾಗಿ ಪ್ರಭಾವಿಸುತ್ತಿವೆ. ಇವು ನಮ್ಮ ಯುವ ತಲೆಮಾರುಗಳನ್ನು ತಮ್ಮ ಬೇರುಗಳಿಂದಲೇ ದೂರಮಾಡುತ್ತಾ ಅವರನ್ನು ಪರಕೀಯರನ್ನಾಗಿಸುತ್ತಿದೆ ಎನ್ನುವ ಆತಂಕ ಅಧ್ಯಾಪಕರನ್ನು ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ನಾಡು–ನುಡಿ, ಜಲ,ಭೂಮಿ, ಸಮಕಾಲೀನ ಸವಾಲುಗಳನ್ನು ಕನ್ನಡದ ಅತ್ಯುತ್ತಮ ಪಠ್ಯಗಳ ಮುಖಾಂತರ ಕಲಿಸಬಹುದೆನ್ನುವ ನಂಬಿಕೆ ಈ ಅಧ್ಯಯನ ಮಂಡಳಿಯದ್ದು. ವಿದ್ಯಾರ್ಥಿಗಳಲ್ಲಿ ಸಾಹಿತ್ಯಕ ಅಭಿರುಚಿಯನ್ನು ಹೆಚ್ಚಿಸಬೇಕು, ಭಾಷೆ ಮತ್ತು ಸಾಹಿತ್ಯಗಳನ್ನು ಕುರಿತ ಪ್ರೀತಿಯನ್ನು ಹೆಚ್ಚಿಸಬೇಕು ಎನ್ನುವುದು ಪಠ್ಯಗಳ ಒಂದು ಆಯಾಮವಾದರೆ, ಮತ್ತೊಂದು ಆಯಾಮವು ನಮ್ಮ ಸಮೃದ್ಧ ಸಾಂಸ್ಕೃತಿಕ.

ಸಾಹಿತ್ಯಕ ಪರಂಪರೆಯ ಅರಿವೂ ಅವರಲ್ಲಿ ಮೂಡಬೇಕೆನ್ನುವುದು.ಎರಡು ವರ್ಷಗಳ "ಪಠ್ಯಗಳಲ್ಲಿ ಅವರಲ್ಲಿ ನಾಗರಿಕ ವ್ಯಕ್ತಿತ್ವದ ಧಾತುಗಳನ್ನು ತುಂಬಬೇಕು. ಸಾಹಿತ್ಯದ ಅಂತಃಕರಣ ಮತ್ತು ಸಾಮಾಜಿಕ ವ್ಯಕ್ತಿತ್ವದ ಬೌದ್ಧಿಕ ಅರಿವು ಅವರಲ್ಲಿ ಸಮನಾಗಿ ಬೆಳೆಯುತ್ತಾ ಹೋಗಬೇಕು. ಇವುಗಳಲ್ಲದೆ ಕನ್ನಡವು ಅವರ ವೃತ್ತಿಯ ದಾರಿಯೂ ಆಗಬೇಕು. ಹಲವು ವೃತ್ತಿಗಳನ್ನು ಅವರು ಆರಿಸಿಕೊಳ್ಳಲು ಅನುವಾಗುವ ಪಠ್ಯಕ್ರಮವೂ ಸೇರಬೇಕು.ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಂಡಳಿಯಲ್ಲಿ 'ವಿಷಯಾಧಾರಿತ ಪಠ್ಯ'ವನ್ನು ರೂಪಿಸಿ, ಅನುಮೋದಿಸಿದೆ.

ಯಾವುದೇ ಕೋರ್ಸಿನ ಮೊದಲ ಸೆಮಿಸ್ಟರ್‌ನ ಮೊದಲ ಭಾಗವಾಗಿ (ನಾಲ್ಕು ಭಾಗಗಳಲ್ಲಿ)ಕನ್ನಡ ನಾಡು–ನುಡಿಯನ್ನು ಕುರಿತ ಭಾಗವು ಕಡ್ಡಾಯವಾಗಿ ಇರಬೇಕು. ಕನ್ನಡ ನಾಡು ರೂಪುಗೊಂಡದ್ದರಿಂದ ಪ್ರಾರಂಭಿಸಿ ಅದರ ಶ್ರೀಮಂತಿಕೆ, ವೈಶಿಷ್ಟ್ಯತೆ, ಅದರ ಲೋಕದೃಷ್ಟಿ, ಕಲಾಪ್ರಕಾರಗಳಲ್ಲಿನ ಸಮೃದ್ಧತೆ, ರಾಜಕೀಯ ಸಾಮಾಜಿಕ ಚಿಂತನೆಗಳ ಸ್ಫೋಪಜ್ಞತೆ, ಅದರ ಭೌಗೋಳಿಕ ಸೌಂದರ್ಯ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಮಹತ್ವದ ಚಳುವಳಿಗಳು, ಭಾರತ ಮತ್ತು ವಿಶ್ವಕ್ಕೆ ಕನ್ನಡದ ಕೊಡುಗೆಗಳು ಇವುಗಳಲ್ಲಿ ಕೆಲವನ್ನು ಆಯ್ದು ಪಠ್ಯಕ್ರಮವನ್ನು ರೂಪಿಸಿಕೊಂಡಿದೆ. ನಾಲ್ಕರಲ್ಲಿ ಕೊನೆಯ ಭಾಗವನ್ನು ಕಡ್ಡಾಯವಾಗಿ ಸಂಕೀರ್ಣ/ತಾಂತ್ರಿಕ/ವೃತ್ತಿ ತರಬೇತಿ ಆಶಯದ/ವೃತ್ತಿ ನೈಪುಣ್ಯತೆ/ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾದ ಅಂಶಗಳನ್ನು ಸಂಕೀರ್ಣ ಘಟಕದಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದಕ್ಕೆ ಪೂರಕವಾಗಿ ಹಲವು ವಿಷಯಗಳನ್ನು ಸಮಿತಿಯು ಆಯ್ಕೆ ಮಾಡಿದೆ. ಸದ್ಯಕ್ಕೆ ಪ್ರಥಮ ಮತ್ತು ದ್ವಿತೀಯ ಸೆಮಿಸ್ಟರ್‌ಗಳಿಗೆ ಇವುಗಳನ್ನು ಸ್ಥೂಲವಾಗಿ ಆರಿಸಲಾಗಿದ್ದು, ಆಯಾ ಘಟಕಗಳ ಆಶಯಕ್ಕೆ ಅನುಗುಣವಾಗಿ ಅಧ್ಯಯನ ಮಂಡಳಿಯು ಪಠ್ಯಗಳನ್ನು ಬೇರೆ ಬೇರೆಮೂಲಗಳಿಂದ ಮತ್ತು ಇಲ್ಲದೆ ಇರುವ ಹೊಸ ಆಯಾಮಗಳನ್ನು ಶೋಧಿಸಿ ಅವುಗಳನ್ನು ಅಳವಡಿಸಿಕೊಳ್ಳಲಾಗಿದೆ. ಕನ್ನಡೇತರರಿಗೆ ಕನ್ನಡ ಕಲಿಕೆ ಪತ್ರಿಕೆಯನ್ನು ಕನ್ನಡ ಅಧ್ಯಾಪಕರೇ ಬೋಧಿಸಬೇಕು.

**ಪಠ್ಯಕ್ರಮಗಳನ್ನು ಕುರಿತು ಕರ್ನಾಟಕ ಸರ್ಕಾರದ ಸಮಿತಿಯು ಸೂಚಿಸಿರುವ ಕೆಳಕಂಡ ಸೂಚನೆಗಳನ್ನು ಅಳವಡಿಸಿ ಕೊಳ್ಳಲಾಗಿದೆ.**

**ಕನ್ನಡ ಭಾಷಾ ಪಠ್ಯ**

1. ಪ್ರತಿ ಪದವಿ ಕ್ರಮಕ್ಕೂ (Stream wise) ಪ್ರತ್ಯೇಕ ಪಠ್ಯಗಳನ್ನು ರೂಪಿಸಲಾಗಿದೆ.

2. ಪ್ರತಿ ಸೆಮಿಸ್ಟರ್‌ಗೆ ನಾಲ್ಕು ಗಂಟೆಗಳ ಬೋಧನಾ ಅವಧಿ ಕಡ್ಡಾಯವಾಗಿರಬೇಕು.

3. ಪಠ್ಯಗಳ ಆಶಯಗಳನ್ನು ಕುರಿತ ಆರಂಭಿಕ ಟಿಪ್ಪಣಿ ಇರಬೇಕು.

4. ಎರಡು ಸೆಮಿಸ್ಟರ್‌ಗಳನ್ನು ಸೇರಿಸಿ ಒಂದೊಂದು ಪಠ್ಯ ಪುಸ್ತಕವನ್ನು ಮಾಡುವುದು.

5. ಪ್ರತಿ ಸೆಮಿಸ್ಟರ್‌ನ ಪಠ್ಯಕ್ರಮದಲ್ಲಿ ನಾಲ್ಕು ಘಟಕಗಳು ಹಾಗೂ ಪ್ರತಿ ಘಟಕದಲ್ಲಿ ಮೂರು ಮೂರು ಅಧ್ಯಾಯಗಳು ಇರಬೇಕು.

6. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳು (ಅನುವಾದ, ಜಾನಪದ, ಮಹಿಳಾ ಮತ್ತು ಅಲಕ್ಷಿತ ಸಮುದಾಯ, ಅಲ್ಪಸಂಖ್ಯಾತ ವರ್ಗಗಳು)ಸೇರಿದಂತೆ ಒಳಗೊಳ್ಳುವಂತೆ ಅಧ್ಯಯನ ಮಂಡಳಿಯು ಕಾಳಜಿ ವಹಿಸಬೇಕು.

7. ಕಡ್ಡಾಯ ಕನ್ನಡ ಭಾಷಾ ಪಠ್ಯಕ್ರಮ ವಿನ್ಯಾಸದಲ್ಲಿ ನಾಲ್ಕನೆಯ ಘಟಕದಲ್ಲಿ (ಸಂಕೀರ್ಣ) ಶೀರ್ಷಿಕೆಯನ್ನೂ ಒಳಗೊಂಡಂತೆ

ಪಠ್ಯಕ್ರಮವನ್ನು ಅಧ್ಯಯನ ಮಂಡಳಿಯಲ್ಲಿ ಚರ್ಚಿಸಿ ರೂಪಿಸಲಾಗಿದೆ. ವೃತ್ತಿಪರ, ತಾಂತ್ರಿಕ ತರಬೇತಿ,ಕೌಶಲ್ಯಾಧಾರಿತ ಮತ್ತು ಸೃಜನಶೀಲ ಚಟುವಟಿಕೆ ಹೀಗೆ ಆಯಾ ಪದವಿ ಕ್ರಮ (Streamwise)ಗಳಿಗೆ ಪೂರಕವಾಗುವಂತೆ ಪಠ್ಯಕ್ರಮವನ್ನು ರೂಪಿಲಾಗಿದೆ.

8. ವಿದ್ಯಾರ್ಥಿಗಳ ಸೃಜನಶೀಲತೆ, ಭಾಷಾ ನೈಪುಣ್ಯ, ಬರೆಹಕೌಶಲ್ಯ ವಿಶ್ಲೇಷಣಾ ಸಾಮರ್ಥ್ಯ, ಸಮಕಾಲೀನಗೊಳಿಸುವಿಕೆ ಮತ್ತು ಅನುವಾದ ಸಾಮರ್ಥ್ಯಗಳನ್ನು ಹೆಚ್ಚಿಸುವುದನ್ನು ಗಮನದಲ್ಲಿಟ್ಟುಕೊಂಡು ನಿಯೋಜಿತ ಕಾರ್ಯ, ಸಾಹಿತ್ಯಕ ಕಾರ್ಯಕ್ರಮ ಇತ್ಯಾದಿಗಳನ್ನು ಆಯೋಜಿಸಬೇಕು.

9. ಪಠ್ಯ ಮತ್ತು ಪಠ್ಯೇತರ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ವೃತ್ತಿಪರ ತಿಳುವಳಿಕೆಯನ್ನು ನೀಡುವುದರ ಜೊತೆಗೆ ಅವರ ಸಮಗ್ರ

ವ್ಯಕ್ತಿತ್ವವನ್ನು ವೃತ್ತಿಪರವಾಗಿ ಸಜ್ಜುಗೊಳಿಸಲು ಅನುಕೂಲವಾಗುವಂತೆ ಇರಬೇಕು. ಇದನ್ನು ಭಾಷಾ ಬೋಧಕರು ಗಮನದಲ್ಲಿಟ್ಟುಕೊಳ್ಳಬೇಕು.

10. ಪೂರಕ ಪಠ್ಯಗಳಾಗಿ ದೃಶ್ಯ ಹಾಗೂ ಶ್ರವ್ಯ ಮಾಧ್ಯಮಗಳನ್ನು ಅವಶ್ಯವಾಗಿ ಬಳಸಿಕೊಳ್ಳಬೇಕು.

11. ಶಿಕ್ಷಣ ಸಂಸ್ಥೆಗಳಲ್ಲಿ ಭಾಷಾ ಪ್ರಯೋಗಾಲಯ (Language Lab) ಇರುವುದು ಅಪೇಕ್ಷಣೀಯ. ಇದರ ಮೂಲಕ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಕಲಿಕೆಯೂ ಸೇರಿದಂತೆ ಇತರ ತಾಂತ್ರಿಕ ಕಲಿಕೆಗಳನ್ನು ತಿಳಿಸಿಕೊಡಬಹುದು. (ಕನ್ನಡದಲ್ಲಿ ವರದಿ ಬರೆಯುವುದು, ಅನುವಾದ ಮಾಡುವುದು ಇತ್ಯಾದಿ).

12. ಭಾಷಾ ಪಠ್ಯ ವಿನ್ಯಾಸದಲ್ಲಿ ನೀಡಲಾಗಿರುವ ಪಠ್ಯಗಳ ಜೊತೆಗೆ ಪೂರಕ ಪಠ್ಯಗಳನ್ನು ಬಳಸಿಕೊಳ್ಳ ಬಹುದು.

13. ಪ್ರತಿ ಪಠ್ಯದಲ್ಲೂ ಪ್ರತಿ ಘಟಕದ ವಿಷಯ (Theme) ವನ್ನು ಕುರಿತ ಟಿಪ್ಪಣಿ ಇರಬೇಕು.

14.ಪಠ್ಯದ ಕೊನೆಯಲ್ಲಿ ಪೂರಕ ಪಠ್ಯಗಳ ಪಟ್ಟಿಯನ್ನು ಕೊಡಬೇಕು. ಪೂರಕ ಪಠ್ಯವನ್ನೂ ನೀಡಬಹುದು. ಪಠ್ಯದ ಮೊದಲು ಆಶಯ ಪಠ್ಯವನ್ನೂ ಸೇರಿಸಬಹುದು.

15. ಭಾಷಾಭ್ಯಾಸದಲ್ಲಿ ವಿದ್ಯಾರ್ಥಿಗಳ ಸ್ವಂತಿಕೆಗೆ ಅವಕಾಶ ಇರಬೇಕು.

16. ಮುಕ್ತ ಆಯ್ಕೆ (ಓಪನ್ ಇಲೆಕ್ಟಿವ್ಸ್) ಪತ್ರಿಕೆಗಳನ್ನು ವಿದ್ಯಾರ್ಥಿಗಳ ವೃತ್ತಿಪರತೆಯನ್ನು ಹೆಚ್ಚಿಸುವ ಸಲುವಾಗಿ ರೂಪಿಸಲಾಗಿದ್ದು.ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೂ ಈ ವಿಷಯಗಳ ಮಹತ್ವವನ್ನು ಕುರಿತು ಮನವರಿಕೆ ಮಾಡಿಕೊಡಬೇಕು.

**ಬಿ.ಎ./ಬಿ.ಎಸ್ಸಿ/ಬಿ.ಕಾಂ./ಬಿ.ಬಿ.ಎ./ಬಿ.ಸಿ.ಎ./ಬಿ.ಎಸ್ಸಿ (ಫ್ಯಾಡ್) — ಕನ್ನಡ ಭಾಷಾ ಪಠ್ಯ:**

**1. ಬಿ.ಎ.– ಕನ್ನಡ ಭಾಷಾ ಪತ್ಯ : ಕಲಾ ಕನ್ನಡ**

## B.A Degree/ Honours Degree Programme: Arts subjects

## Semester 1 ಬಿ.ಎ.– ಕನ್ನಡ ಭಾಷಾ ಪತ್ಯ : ಕಲಾ ಕನ್ನಡ

ಪ್ರಧಾನ ಸಂಪಾದಕರು ಡಾ.ಸಿ.ನಾಗಭೂಷಣ ನಿರ್ದೇಶಕರು, ಕನ್ನಡ ಅಧ್ಯಯನ ವಿಭಾಗ

ಸಂಪಾದಕರು: ಶ್ರೀಮತಿ ಪಿ. ವನಜ , ಡಾ. ಸುಧಾ ಎ.ಸಿ,
ಶ್ರೀಮತಿ ವೀಣಾ ಎನ್. ಹೆಚ್. ಶ್ರೀಮತಿ ಶೋಭಾರಾಣಿ ಎನ್.

| Course Title: ಬಿ.ಎ. – ಕನ್ನಡ ಭಾಷಾ ಪತ್ಯ : ಕಲಾಕನ್ನಡ | |
|---|---|
| Total Contact Hours: | Course Credits:03 |
| Formative Assessment Marks : 40(CIE) | Duration of ESA/EXAM: 3 hours |
| Model Syllabus Authors: Multiple Authors | Summative Assessment Marks: 60 (SEE) |

ಕೋರ್ಸ್‌ಗಳ ವಿವರಗಳು

| ವಿವರಗಳು | ಬೋಧನಾ ಅವಧಿ 04 ಗಂಟೆಗಳು |
|---|---|
| ಘಟಕ–1 ಕನ್ನಡ ನಾಡು–ನುಡಿ–ಚಿ೦ತನೆ | 13/14 |
| ಘಟಕ–2 ಪ್ರಕೃತಿ | 13/14 |
| ಘಟಕ–3 ಬಾಲ್ಯ | 13/14 |
| ಘಟಕ–4 ಸಂಕೀರ್ಣ | 13/14 |

**ಪ್ರಸ್ತಾವನೆ**

ಕಲಾ ಕನ್ನಡ ಪತ್ಯವನ್ನು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳಿಗೆ ಅನುಗುಣವಾಗಿ ರೂಪಿಸಲಾಗಿದೆ. ಇಲ್ಲಿಯ ಮುಖ್ಯ ಆಶಯ ವಿಷಯಾಧಾರಿತ ಪತ್ಯಕ್ರಮ.ಈ ಮೂಲಕ ಕಲಾ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಕೌಶಲ್ಯವನ್ನು ಕಲಿಸುವುದರ ಜೊತೆಗೆ ಕನ್ನಡ ಸಾಹಿತ್ಯ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಪರಿಚಯಿಸುವುದು ಮುಖ್ಯ ಆಶಯವಾಗಿದೆ.

ಕನ್ನಡ ಭಾಷಾ ಕಲಿಕೆಯ ನಾಲ್ಕು ಆಯಾಮಗಳಾದ ಓದುವುದು, ಬರೆಯುವುದು, ಅರ್ಥ ಮಾಡಿಕೊಳ್ಳುವುದು, ಮಾತನಾಡುವುದು ಇವುಗಳನ್ನು ಸಮರ್ಪಕವಾಗಿ ಕಲಿಸುವ ಪತ್ಯದೊಂದಿಗೆ ಅಭ್ಯಾಸಗಳನ್ನು ರೂಪಿಸಲಾಗಿದೆ.

ವಿದ್ಯಾರ್ಥಿಗಳಲ್ಲಿ ಹೊಸ ಆಲೋಚನಾ ಕ್ರಮಗಳನ್ನು ರೂಪಿಸುವುದು, ವೈಚಾರಿಕ ಮನೋಭಾವವನ್ನು ಬೆಳೆಸುವುದು, ಪ್ರಾಯೋಗಿಕ ಚಿಂತನೆಗೆ ಒತ್ತು ಕೊಡುವುದು ಒಟ್ಟಾರೆಯಾಗಿ ಯುವ ಜನಾಂಗದ ಮನಸ್ಸನ್ನು, ವ್ಯಕ್ತಿತ್ವವನ್ನು ರೂಪಿಸುವುದು ಈ

ಪಠ್ಯದ ಉದ್ದೇಶ. ಅದರೊಂದಿಗೆ ಕಲಾ ವಿದ್ಯಾರ್ಥಿಗಳು ಸೃಜನಶೀಲ ಬರವಣಿಗೆಯಲ್ಲಿ ತೊಡಗಿಕೊಳ್ಳಲು ಅಗತ್ಯವಾದ ಕೌಶಲ್ಯಾಧಾರಿತ ಪಠ್ಯ ಇದಾಗಿದೆ. ಇದಕ್ಕೆ ಪೂರಕವಾಗಿ ಪಠ್ಯವನ್ನು ವಿಷಯಾಧಾರಿತವಾಗಿ ರೂಪಿಸಲಾಗಿದೆ. ಈ ಮೂಲಕ ಬದುಕನ್ನು ಕುರಿತು ಸಮಗ್ರ ಗ್ರಹಿಕೆಯನ್ನು ವಿದ್ಯಾರ್ಥಿಗಳು ಪಡೆಯುವಲ್ಲಿ ಪಠ್ಯ ನೆರವಾಗುತ್ತದೆ.

ಕನ್ನಡ ನಾಡು– ನುಡಿ– ಚಿಂತನೆ, ಪ್ರಕೃತಿ, ಬಾಲ್ಯ, ಸಂಕೀರ್ಣ ಎಂಬ ನಾಲ್ಕು ವಿಷಯಾಧಾರಿತ ಘಟಕಗಳಾಗಿ ಪಠ್ಯವನ್ನು ವಿಂಗಡಿಸಲಾಗಿದೆ.

**ಘಟಕ–1 ಕನ್ನಡ ನಾಡು –ನುಡಿ– ಚಿಂತನೆ**

ಮೊದಲ ಘಟಕದಲ್ಲಿ ಕನ್ನಡ ನಾಡು ನುಡಿಗಳ ಇತಿಹಾಸ, ವೈಶಿಷ್ಟ್ಯತೆ, ವೈಭವಗಳನ್ನು ಒಳಗೊಂಡ ಪರಿಚಯಿಸುವ ಪಠ್ಯಗಳನ್ನು ಇಲ್ಲಿ ನೀಡಲಾಗಿದೆ. ಇಂದಿನ ವಿದ್ಯುನ್ಮಾನ ಯುಗದಲ್ಲಿ ಸಾಹಿತ್ಯದಿಂದ ವಿಮುಖರಾಗುತ್ತಿರುವ ಯುವ ಪೀಳಿಗೆಗೆ ಸಾಹಿತ್ಯದ ಸಮಕಾಲೀನ ಔಚಿತ್ಯದ ಬಗ್ಗೆ ತಿಳಿಸುವುದು ಇಲ್ಲಿಯ ಮುಖ್ಯ ಆಶಯ. ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಕವಿತೆ, ಲೇಖನಗಳನ್ನು ಇಲ್ಲಿ ಕೊಡಲಾಗಿದೆ.

1. ಕನ್ನಡ ಪದಗೊಳ್ – ಜಿ.ಪಿ. ರಾಜರತ್ನಂ

   ಪೂರಕ ಪಠ್ಯ: 1. ಕವಿರಾಜಮಾರ್ಗದಿಂದ ಆಯ್ದ ಕನ್ನಡ ನಾಡು ನುಡಿಗೆ ಸಂಬಂಧಿಸಿದ 3 ರಿಂದ 4 ಪದ್ಯಗಳು

2. ಇಂಗ್ಲಿಷ್‌ನೊಡನೆ ಗುದ್ದಾಟದಲಿ– ದೇವನೂರ ಮಹದೇವ (ಎದೆಗೆ ಬಿದ್ದ ಅಕ್ಷರದಿಂದ ಆಯ್ದ ಭಾಗ)

   ಪೂರಕ ಪಠ್ಯ: 1. ಕನ್ನಡ ಮತ್ತು ವಿಕೇಂದ್ರೀಕರಣ–ಯು. ಆರ್. ಅನಂತಮೂರ್ತಿ (ಭಾಷಣದ ಆಯ್ದ ಭಾಗ)

3. ಕನ್ನಡದ ಉಳಿವಿಗೆ ಒಂದೇ ಹಾದಿ: ಮುಕ್ತ ಜ್ಞಾನ ಮತ್ತು ಮುಕ್ತ ತಂತ್ರಜ್ಞಾನ–ಬೇಳೂರು ಸುದರ್ಶನ

   ಪೂರಕ ಪಠ್ಯ: ತಂತ್ರಜ್ಞಾನದ ದೇಸೀಕರಣ–ಕನ್ನಡದ ಜಾಗತೀಕರಣ–ಎನ್. ಶಂಕರಪ್ಪ ತೋರಣಗಲ್ಲು ಅವರ ಲೇಖನದ ಆಯ್ದ ಭಾಗ

**ಘಟಕ–2 ಪ್ರಕೃತಿ**

ಪ್ರಕೃತಿ ಮತ್ತು ಮನುಷ್ಯರ ನಡುವಿನ ಸಂಬಂಧ ಇಂದಿನ ಅನಿವಾರ್ಯ ಅಗತ್ಯ. ಈ ಅನಿವಾರ್ಯತೆಯನ್ನು ಮರೆತರೆ ಅಪಾಯ ನಿಶ್ಚಿತ. ಪ್ರಕೃತಿಯು ಮನುಷ್ಯನ ಜೀವ ಸೆಲೆ ಅತಿಯಾದ ನಗರೀಕರಣದ ಈ ಹೊತ್ತಿನಲ್ಲಿ ನಿಸರ್ಗದಿಂದ ದೂರ ಚಲಿಸುತ್ತಿರುವ ಮನುಷ್ಯನನ್ನು ಮತ್ತೆ ಅದರ ಒಳಗೆ ತರುವುದು ಅತ್ಯಂತ ಅಗತ್ಯ. ಈ ನಿಟ್ಟಿನಲ್ಲಿ ಎರಡನೇ ಘಟಕದಲ್ಲಿ ಕನ್ನಡದ ವಿವಿಧ ಕವಿ ಲೇಖಕರ ಜೀವಪರ ಆಯಾಮವುಳ್ಳ ಪಠ್ಯಗಳನ್ನು ನೀಡಲಾಗಿದೆ.

1. ನಾವು ಮತ್ತು ಮರಗಳು –ಜಿ.ಎಸ್. ಶಿವರುದ್ರಪ್ಪ

   ಪೂರಕ ಪಠ್ಯ: ನಾನೊಂದು ಮರವಾಗಿದ್ದರೆ – ಮೂಡ್ನಾಕೂಡು ಚಿನ್ನಸ್ವಾಮಿ

2. ಬಿದಿರು ಒಂದು ಭಾವನೆ ಹಲವು – ಬಿ.ಜಿ.ಎಲ್. ಸ್ವಾಮಿ

   ಪೂರಕ ಪಠ್ಯ: ಬಿದಿರು ಎಂಬ ಬೆರಗು– ಸತೀಶ್ ಜಿ.ಕೆ.ತೀರ್ಥಹಳ್ಳಿ

3. ಒತ್ತೆಯಾಳಾಗಿ ಪರಿಸರ– ಪೂರ್ಣಚಂದ್ರ ತೇಜಸ್ವಿ

   ಪೂರಕ ಪಠ್ಯ: ಪರಿಸರ ಸಂರಕ್ಷಣೆ ಮತ್ತು ರಾಜಕೀಯ ಬದ್ಧತೆ – ನಾಗೇಶ ಹೆಗಡೆ

**ಘಟಕ–3 ಬಾಲ್ಯ**

ಮನುಷ್ಯನ ಜೀವಿತಾವಧಿಯಲ್ಲಿ ಬಾಲ್ಯ ಅತ್ಯಂತ ಮುಖ್ಯವಾದ ಘಟ್ಟ, ಮುಗ್ಧತೆ, ಲಾಲಿತ್ಯ, ಕುತೂಹಲಗಳನ್ನು ಅದರೊಂದಿಗೆ ಪ್ರಶ್ನೆಗಳನ್ನು ಒಳಗೊಂಡ ಕಾಲ. ಈ ಕಾಲಘಟ್ಟದಲ್ಲಿ ನಡೆಯುವ ಹಲವು ಘಟನೆಗಳು ಇಡೀ ಬದುಕಿನ ಮೇಲೆ ಪರಿಣಾಮ ಬೀರುವಷ್ಟು ಪ್ರಬಲವಾಗಿರುತ್ತದೆ. ವ್ಯಕ್ತಿತ್ವ ರೂಪಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈಗಷ್ಟೇ ಬಾಲ್ಯವನ್ನು ಕಳೆದು ಹದಿಹರೆಯದಲ್ಲಿ ಕಾಲಿಡುತ್ತಿರುವ ಪದವಿ ವಿದ್ಯಾರ್ಥಿಗಳಿಗೆ ತಮ್ಮ ಬಾಲ್ಯ ಬಣ್ಣಗಳನ್ನು ಮೆಲುಕು ಹಾಕುವ ಅವಕಾಶವನ್ನು ನೀಡಿ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಸೃಜನಶೀಲ ಬರವಣಿಗೆಯಲ್ಲಿ ತೊಡಗಿಕೊಳ್ಳಲು ಪ್ರೇರೇಪಿಸುವಂತೆ ಪಠ್ಯವನ್ನು ರೂಪಿಸಲಾಗಿದೆ.

1. ಕೂಸಿದ್ದ ಮನೆಗೆ – ಜನಪದ ತ್ರಿಪದಿಗಳು

   ಪೂರಕಪಠ್ಯ: ಕೂಸಿನ ಕನಸು– ಕುವೆಂಪು

2. ಕನ್ನಡ ನನ್ನ ನೆಚ್ಚಿನ ಪಾಠ– ಸಾರಾ ಅಬೂಬಕರ್ ಚಂದ್ರಗಿರಿಯ ತೀರದಲ್ಲಿ ಕಾದಂಬರಿಯ ಆಯ್ದ ಭಾಗ

   ಪೂರಕ ಪಠ್ಯ: ಸಾವಿನ ತೂಗುಕತ್ತಿಯ ಕೆಳಗೆ– ವಾರಿಸ್ ಡೇರಿ ಅವರ ಆತ್ಮಕಥೆಯ ಆಯ್ದ ಭಾಗ ಕನ್ನಡಕ್ಕೆ : ಜಗದೀಶ್ ಕೊಪ್ಪ

3. ಐನೋರ ಹೊಲ – ಡಾ. ಸಿದ್ದಲಿಂಗಯ್ಯ ಊರುಕೇರಿ ಆತ್ಮಕಥೆಯ ಆಯ್ದ ಭಾಗ

   ಪೂರಕ ಪಠ್ಯ : ತಮಟೆ ಬಡೆಯುವುದು– ತುಂಬಾಡಿ ರಾಮಯ್ಯ ಅವರ ಆತ್ಮಕತೆಯ ಭಾಗ

**ಘಟಕ–4 ಸಂಕೀರ್ಣ**

ನಾಲ್ಕನೇ ಘಟಕದಲ್ಲಿ ಸಂಕೀರ್ಣ ಶೀರ್ಷಿಕೆಯಡಿ ಆತ್ಮಕಥನದ ಭಾಗಗಳನ್ನು ನೀಡಲಾಗಿದೆ. ಸೃಜನಶೀಲ ಬರಹಗಾರರಾಗಿ ರೂಪುಗೊಳ್ಳಲು ಲೇಖಕರ ಬದುಕು ಕಾರಣವಾದ ಬಗೆಯನ್ನು ಅರಿಯಲು ಈ ಪಠ್ಯಗಳು ಸಹಕಾರಿ. ಬದುಕಿನ ಅನುಭವಗಳು ಮಾಗಿದಾಗ ಸಾಹಿತ್ಯ ಸೃಷ್ಟಿಗೊಳ್ಳುತ್ತದೆ. ಕೆಲವರ ಹೋರಾಟದ ಬದುಕಿನ ಓದು ನಮ್ಮ ಬದುಕನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

1. ಸಂವಿಧಾನದ ಆರ್ಥಿಕ ಸ್ವಾತಂತ್ರ್ಯದ ಆಶಯಗಳು– ಡಾ. ವೆಂಕಟಾಚಲ ಹೆಗಡೆ

   ಪೂರಕ ಪಠ್ಯ: ಅರ್ಥ ಸ್ವಾತಂತ್ರ್ಯ @ 75 ಹೀಗೊಂದು ಹಿನ್ನೋಟ– ಎ. ನಾರಾಯಣ

2. ಇತಿಹಾಸ ಅಧ್ಯಯನದ ಮುಂದುವರಿದ ಮಾದರಿಗಳು– ಗೋಪಾಲ ರಾವ್

   ಪೂರಕ ಪಠ್ಯ: ಚರಿತ್ರೆ ಜೊತೆಗೆ ಸಾಮಾನ್ಯರ ಸೆಲ್ಫಿ– ಅಗ್ರಹಾರ ಕೃಷ್ಣಮೂರ್ತಿ

3. ರಾಜಕೀಯ ಸಿದ್ಧಾಂತ – ಹೆಚ್. ಎಸ್. ದೊರೆಸ್ವಾಮಿ

   ಪೂರಕ ಪಠ್ಯ: ಒಂದು ಪುಸ್ತಕದ ಅದ್ಭುತ ಅನುಭವ– ಗಾಂಧೀಜಿಯವರ ನನ್ನ ಸತ್ಯಾನ್ವೇಷಣೆ ಕೃತಿಯ ಒಂದು ಭಾಗ

## Semester –2

| Course Title: ಬಿ. ಎ – ಕನ್ನಡ ಭಾಷಾ ಪಠ್ಯ: ಕಲಾ ಕನ್ನಡ |
|---|

| | |
|---|---|
| Total Contact Hours: 52 to 56 | Course Credits :03 ಬೋಧನಾ ಅವಧಿ :4 ಗಂಟೆಗಳು |
| Formative Assessment Marks : 40(CIE) | Duration of ESA/EXAM: 3 hours |
| Model Syllabus Authors: Multiple Authors | Summative Assessment Marks: 60 (SEE) |

| **Course Title: ಬಿ. ಎ – ಕನ್ನಡ ಭಾಷಾ ಪಠ್ಯ:** | |
|---|---|
| ಘಟಕ–1 ಜಾಗತೀಕರಣ | 13/14 |
| ಘಟಕ–2 ಸಮಾಜ | 13/14 |
| ಘಟಕ–3 ಪ್ರೀತಿ | 13/14 |
| ಘಟಕ–4 ಸಂಕೀರ್ಣ | 13/14 |

**ಘಟಕ – 1**

ಜಾಗತೀಕರಣ

ಎರಡನೇ ಸೆಮಿಸ್ಟರ್ ನಲ್ಲಿ ಜಾಗತೀಕರಣ ಸಮಾಜ, ಪ್ರೀತಿ ಮತ್ತು ಸಂಕೀರ್ಣ ಎಂಬ ನಾಲ್ಕು ಘಟಕಗಳಿವೆ. ಜಾಗತೀಕರಣ ಇಂದು ಪ್ರಮುಖ ವಿದ್ಯಮಾನವಾಗಿದ್ದು ಎಲ್ಲಾ ರಾಷ್ಟ್ರಗಳೂ ಅದರಲ್ಲಿ ಒಳಗೊಳ್ಳುತ್ತಿವೆ. ಇದರ ಪರಿಣಾಮಗಳನ್ನು ಕುರಿತು ಸಾಹಿತ್ಯ ಲೋಕದಲ್ಲಿ ಹಲವು ಚರ್ಚೆಗಳು ನಡೆದಿವೆ. ಜಾಗತೀಕರಣ ನಮ್ಮ ಬದುಕಿನ ಸ್ವರೂಪವನ್ನು ಬದಲಿಸಿದೆ. ಇಂದು ನಮ್ಮ ಬದುಕಿನ ಆದ್ಯತೆಗಳು ಬದಲಾಗಿವೆ. ಜಾಗತೀಕರಣ ಪ್ರಗತಿ ಪರವಾಗಿದೆ ಎನಿಸಿದರೂ ಒಟ್ಟಾರೆ ನಮ್ಮ ಸಾಂಸ್ಕೃತಿಕ ಬರಹಗಳಲ್ಲಿ ಪಲ್ಲಟ ಉಂಟುಮಾಡಿದೆ. ಈ ಹಿನ್ನೆಲೆಯಲ್ಲಿ ಜಾಗತೀಕರಣದ ಬಗ್ಗೆ ವಿದ್ಯಾರ್ಥಿಗಳನ್ನು ವಾಸ್ತವ ಚಿಂತನೆಗೆ ಒಳಗು ಮಾಡುವ ಉದ್ದೇಶ ಈ ಪಠ್ಯಗಳಲ್ಲಿದೆ.

ಸಮಾಜ ಬಹುಮುಖಿಯಾದದ್ದು ಇಲ್ಲಿ ಸಂಘರ್ಷ ಅನುಸಂಧಾನದ ಪ್ರಕ್ರಿಯೆಗಳು ನಿರಂತರ, ಜಾತಿ ಧರ್ಮ, ವರ್ಗ, ಲಿಂಗ ಮೂಲದ ರಾಜಕಾರಣದ ಚಹರೆಗಳನ್ನು ಸಾಹಿತ್ಯ ಘೋಷಿತ ನೆಲೆಯಲ್ಲಿಯೋ ಅಥವಾ ಅಘೋಷಿತ ನೆಲೆಯಲ್ಲಿಯೋ ಹಿಡಿದಿಟ್ಟಿರುತ್ತದೆ. ಏಕೆಂದರೆ ಸಾಹಿತ್ಯವೂ ಸಮಾಜದ ಸೃಷ್ಟಿ. ಇವೆಲ್ಲವುಗಳಿಗೆ ಒಳಗಾಗಿಯೇ ಅವುಗಳನ್ನು ಮೀರುವ ಕಲೆಯನ್ನು ರೂಪಿಸಿಕೊಳ್ಳಲು ಅನುಕೂಲವಾಗುವಂತೆ ಪಠ್ಯವನ್ನು ಸಿದ್ಧಪಡಿಸಲಾಗಿದೆ.

ಜಾಗತೀಕರಣವು ಸಮಕಾಲೀನ ಜಾಗತಿಕ ವಿದ್ಯಮಾನವಾಗಿದ್ದು, ಅದು ಇಂದು ಆಯ್ಕೆಯಾಗಿ ಉಳಿದಿಲ್ಲ. ಅದು ಬೇಕಾಗಿ ಬೇಡವಾಗಿ ಎಲ್ಲರಾಷ್ಟ್ರಗಳೂ ಅನಿವಾರ್ಯವಾಗಿ ಒಳಗಾಗುತ್ತಿರುವ ಒಂದು 'ಪ್ರಕ್ರಿಯೆಯಾಗಿದೆ. ಇಡೀ ವಿಶ್ವವನ್ನೇ "ಏಕತಾಣ' ವಾಗಿ "ವಿಶ್ವ ಹಳ್ಳಿಯಾಗಿ ರೂಪಿಸುವುದು ಇದರ ಉದ್ದೇಶವಾಗಿದೆ. ಆದರೆ ಇದರ ಪರಿಣಾಮವು ಮಾತ್ರ ಇದಕ್ಕೆ ವಿರುದ್ಧವಾಗಿದೆ. ಇದರ ನೇತ್ಯಾತ್ಮಕ ಮತ್ತು ನೇತ್ಯಾತ್ಮಕ ಅಂಶಗಳನ್ನು ಪಠ್ಯ ಗಳಾಗಿ ಇಡುವ ಮೂಲಕ ವಿದ್ಯಾ ರ್ಥಿಗಳಲ್ಲಿ ಸಮಕಾಲೀನ ಆಗುಹೋಗುಗಳನ್ನು ಕುರಿತ ಅರಿವನ್ನು ಹೆಚ್ಚಿಸಬಹುದಾಗಿದೆ. ಸಂಸ್ಕೃತಿಗಳ ವೈವಿಧ್ಯತೆ, ಜೀವಂತಿಕೆಯನ್ನು ನಾಶ ಮಾಡುತ್ತಾ ಏಕರೂಪಿ ಸಂಸ್ಕೃತಿಯನ್ನು ಇದು ರೂಪಿಸುತ್ತಿದೆ. "ಆಹಾರ ವಸ್ತ್ರ ಕ್ರೀಡೆ, ಸಾಂಸ್ಕೃತಿಕ ಆಚರಣೆಗಳು, ದೈನಂದಿನ

ಬಳಕೆಯ ಉತ್ಪನ್ನಗಳು: ಈ ಎಲ್ಲದರ ಮೇಲೂ ಬಲಾಢ್ಯ ರಾಷ್ಟ್ರಗಳ ಆಕ್ರಮಣವಾಗುತ್ತಿದೆ. ಭಾರತವೂ ಸೇರಿದರಿತೆ ಮೂರನೇ ಜಗತ್ತಿನ ರಾಷ್ಟ್ರಗಳು ಇದರ ಮೂಲ ಬಲಿಪಶುಗಳಾಗುತ್ತಿವೆ ಎನ್ನುವುದನ್ನು" ನಾವು ಅವಶ್ಯವಾಗಿ ಗಮನಿಸಬೇಕು.ಅನೇಕತೆಯಲ್ಲಿ ಏಕತೆ ಎನ್ನುವ ಜನತಾಂತ್ರಿಕ ಆಶಯಕ್ಕೆ ವಿರುದ್ಧವಾಗಿ ಏಕತೆಯ ದಬ್ಬಾಳಿಕೆಯ ಮೂಲಕ ಅನೇಕ ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಗಳನ್ನೇ ನಾಶ ಮಾಡುವ ಮೂಲಕ ಹಲವು ವೃತ್ತಿಗಳನ್ನೇ' ಇದು ವಿನಾಶದಂಚಿಗೆ ತಳ್ಳುತ್ತಿದೆ ಎನ್ನುವ ಅಂಶವನ್ನೂ ಗಮನಿಸಬೇಕು. ಅಮಾನವೀಯ ಮಾನೋವಿನ್ಯಾಸವನ್ನೂ ಇದು ರೂಪಿಸುತ್ತಿದೆ. ಜಗತ್ತಿನ ಮೂಲಾಧಾರವೇ ಆದ ಪ್ರೀತಿಗೆ ವಿವಿಧ ಆಯಾಮಗಳಿವೆ. ವಿನಾಶಕ ಶಕ್ತಿಗಳು ಪ್ರಬಲಗೊಳ್ಳುತ್ತಿರುವ ಇಂದಿನ ಜಾಗತಿಕ ಪರಿಸರದಲ್ಲಿ ಜೀವಜಾಲವನ್ನು ಒಗ್ಗೂಡಿಸುವ ಸಹಬಾಳ್ವೆಗೆ ಹಚ್ಚುವ ಶಕ್ತಿ ಪ್ರೀತಿಗಿದೆ. ಅಂತಹ ಶಕ್ತಿಯನ್ನು ಎಲ್ಲರಲ್ಲಿ ಜಾಗೃತಗೊಳಿಸುವ ಪಠ್ಯಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು ಈ ಘಟಕದ ಆಶಯ.

1. ಗಿರಿಣಿಯ ವಿಸ್ತಾರ ನೋಡಮ್ಮಾ – ಶಿಶುನಾಳ ಷರೀಫ
2. ಕೋಕಾ ಕೋಲಾ– ಆಶಿಶ್ ನಂದಿ
3. ಜಾಗತೀಕರಣದಿಂದ ಕಿರಿದಾಗುತ್ತಿರುವ ಅವಳ ಜಗತ್ತು – ಆರ್.ಪೂರ್ಣಿಮಾ

ಘಟಕ: 2

ಸಮಾಜ:

ನಾಲ್ಕನೇ ಘಟಕದಲ್ಲಿ ಸಂಕೀರ್ಣ ಶೀರ್ಷಿಕೆಯಡಿ ಅನ್ಯಜ್ಞಾನ ಶಿಸ್ತುಗಳಿಗೆ ಪರಿಚಯಕ್ಕೆ ಒತ್ತು ನೀಡಲಾಗಿದೆ. ಕಲಾ ವಿಷಯಗಳಿಗೆ ಪ್ರಾಮುಖ್ಯಗೆ ನೀಡುವುದರ ಮೂಲಕ ಸಾಹಿತ್ಯೇತರ ಶಿಸ್ತುಗಳು ಸಾಹಿತ್ಯದೊಂದಿಗೆ ಪಡೆದುಕೊಂಡಿರುವ ಸಂಬಂಧಧ ಚರ್ಚೆ ಮಾಡಲಾಗಿದೆ. ಜೊತೆಗೆ ಸಾಹಿತ್ಯದ ಅನನ್ಯತೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿಕೊಡುವ ಉದ್ದೇಶ ಇಲ್ಲಿನ ಪಠ್ಯಗಳಲ್ಲಿದೆ. ಅಭ್ಯಾಸ ಚಟುವಟಿಕೆಗಳನ್ನು ನೀಡುವುದರ ಮೂಲಕ ಭಾಷಾ ಕೌಶಲ್ಯವನ್ನು ಉತ್ತಮಪಡಿಸಿಕೊಳ್ಳಲು ಮತ್ತು ಸಂಭಾವ್ಯ ಪ್ರಶ್ನೆಗಳ ಮೂಲಕ ಸಂಬಂಧಿತ ಪಠ್ಯವನ್ನು ಗ್ರಹಿಸಲು ಅನುವು ಮಾಡಿಕೊಳ್ಳಲಾಗಿದೆ. ಮತ್ತು ಪರಿಕಲ್ಪನೆಗಳ ವಿಸ್ತೃತ ಅರಿವಿಗೆ ಸಹಕಾರ ನೀಡಲಾಗಿದೆ.

1. **ಆವಕುಲವಾದರೇನು– ಪುರಂದರ ದಾಸರು**
   ಕುಲಕುಲವೆನ್ನುತಿಹರು– ಕನಕದಾಸರು
2. ಪುಟ್ಟ ವಿಧವೆ– ದ.ರಾ. ಬೇಂದ್ರೆ
3. ಸೀತೆಯ ಜಡೆ– ವೋಲ್ಗಾ: ಜಿ.ವೀರಭದ್ರಗೌಡ

ಘಟಕ : 3

ಪ್ರೀತಿ

ಪ್ರೀತಿ ಎನ್ನುವುದು ಮನುಷ್ಯರ ಮಾತ್ರವಲ್ಲ ಜಗದ ಮೂಲತತ್ವವೇ ಆಗಿದೆ. ಬದುಕನ್ನು, ಸಂಬ0ಧಗಳನ್ನು, ವೃತ್ತಿಯನ್ನು, ಸಮುದಾಯವನ್ನು ಹೀಗೆ ಯಾವುದನ್ನೇ ತೆಗೆದುಕೊಂಡರೂ ಪ್ರೀತಿಯ ಜೀವದ್ರವ್ಯವಿಲ್ಲದೆ ಯಾವುದನ್ನೂ ಕಟ್ಟಲಾಗದು. ಪ್ರೀತಿ ಅಕಾರಣವಾಗಿರಬೇಕು ದ್ವೇಷ ಸಕಾರಣವಾಗಿರಬೇಕು ಎನ್ನುವ ತತ್ವಜ್ಞಾನಿಯ ಮಾತು ಪ್ರೀತಿಯ ಪೋಷಕ ಶಕ್ತಿಯನ್ನೂ ದ್ವೇಷದ ವಿನಾಶಕ ಶಕ್ತಿಯನ್ನೂ ಹೇಳುತ್ತದೆ. ಪ್ರೀತಿಗೆ ಅಸಾಧ್ಯವಾದುದು ಯಾವುದೂ ಇಲ್ಲ ಎನ್ನುವುದು, ಪ್ರೀತಿಯ ಅಸಾಧಾರಣ ಸಾಧ್ಯತೆಯನ್ನುಬಿಂಬಿಸುತ್ತದೆ. ಅಪ್ಪಟ ಪ್ರೀತಿಯು ಎಲ್ಲವನ್ನೂ ಒಳಗೊಳ್ಳುತ್ತಾ, ಎಲ್ಲರನ್ನೂ, ಎಲ್ಲವನ್ನೂ ಬೆಳೆಸುವ ಆಶಯದ್ದು.

ಆದ್ದರಿಂದಲೇ ಪ್ರೀತಿ ತತ್ವವು "ಒಳಗೊಳ್ಳುವ' ನೆಲೆಯದ್ದೇ ಹೊರತು ನಿರಾಕರಣೆಯ ನೆಲೆಯದ್ದಲ್ಲ. ಪ್ರೀತಿಯನ್ನು ಜೀವಾನುಕಂಪೆ ಎಂದೂ ಕರೆಯಬಹುದು.ಸಾಮರಸ್ಯದ ಬದುಕಿನ ಅಗತ್ಯವಿರುವ ಪ್ರಸ್ತುತ ಬದುಕಿನ ಸಂದರ್ಭದಲ್ಲಿ ಪ್ರೀತಿ ತತ್ವವನ್ನು ಬೆಳೆಸುವ ಪಠ್ಯಗಳನ್ನು ವಿದ್ಯಾರ್ಥಿಗಳಿಗೆ ಓದಿಸುವುದು ಅತ್ಯವಶ್ಯಕವೆಂದು ಪರಿಭಾವಿಸಿ ಸಂಬಂಧಿಸಿದ ಪಠ್ಯಗಳನ್ನು ಕೊಡಲಾಗಿದೆ.

1. ಕಾದಂಬರಿಯ ಪ್ರಥಮ ಸಂದರ್ಶನ – ಒಂದನೆ ನಾಗವರ್ಮ (ಕರ್ನಾಟಕ ಕಾದಂಬರಿಯ ಆಯ್ದ ಭಾಗ)
   ಪೂರಕ: ಪ್ರತೀಕ್ಷೆ – ಪುತಿನ
2. ಶಕುಂತಲೆಯೊಡನೆ ಕಳೆದ ಅಪರಾಹ್ನ– ವೈದೇಹಿ
   ಪೂರಕ: ಕುಸುಮ ಕಠೋರ ಶಕುಂತಲೆ – ಎಂ.ಎಸ್.ಆಶಾದೇವಿ
3. ಪ್ರೀತಿ ಒಂದು ಕಲೆಯೇ– ಮೂಲ–ಎರಿಕ್ ಫ್ರಾಂ
   ಅನುವಾದ: ಕೆ.ವಿ. ನಾರಾಯಣ, ಎಚ್.ಎಸ್, ರಾಘವೇಂದ್ರರಾವ್
   ಪೂರಕ: ಪ್ರಿಯತಮೆ–ಸೂಫಿಕತೆ–ಜೋಗಿ

ಘಟಕ: 4

ಸಂಕೀರ್ಣ

ನಾಲ್ಕನೇ ಘಟಕದಲ್ಲಿ ಸಂಕೀರ್ಣ ಶೀರ್ಷಿಕೆಯಡಿ ಅನ್ಯಜ್ಞಾನ ಶಿಸ್ತುಗಳಿಗೆ ಪರಿಚಯಕ್ಕೆ ಒತ್ತು ನೀಡಲಾಗಿದೆ. ಕಲಾ ವಿಷಯಗಳಿಗೆ ಪ್ರಾಮುಖ್ಯಗೆ ನೀಡುವುದರ ಮೂಲಕ ಸಾಹಿತ್ಯೇತರ ಶಿಸ್ತುಗಳು ಸಾಹಿತ್ಯದೊಂದಿಗೆ ಪಡೆದುಕೊಂಡಿರುವ ಸಂಬಂಧಧ ಚರ್ಚೆ ಮಾಡಲಾಗಿದೆ. ಜೊತೆಗೆ ಸಾಹಿತ್ಯದ ಅನನ್ಯತೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿಕೊಡುವ ಉದ್ದೇಶ ಇಲ್ಲಿನ ಪಠ್ಯಗಳಲ್ಲಿದೆ. ಅಭ್ಯಾಸ ಚಟುವಟಿಕೆಗಳನ್ನು ನೀಡುವುದರ ಮೂಲಕ ಭಾಷಾ ಕೌಶಲ್ಯವನ್ನು ಉತ್ತಮಪಡಿಸಿಕೊಳ್ಳಲು ಮತ್ತು ಸಂಭಾವ್ಯ ಪ್ರಶ್ನೆಗಳ ಮೂಲಕ ಸಂಬಂಧಿತ ಪಠ್ಯವನ್ನು ಗ್ರಹಿಸಲು ಅನುವು ಮಾಡಿಕೊಳ್ಳಲಾಗಿದೆ. ಮತ್ತು ಪರಿಕಲ್ಪನೆಗಳ ವಿಸ್ತೃತ ಅರಿವಿಗೆ ಇಲ್ಲಿ ಅವಕಾಶ ಕಲ್ಪಿಸಲಾಗಿದೆ.

1. ಮಾಂತ್ರಿಕ ಚಿತ್ರಗಳ ಜಾದೂಗಾರ– ಟಿ.ಎನ್.ಎ. ಪೆರುಮಾಳ್ (ಛಾಯಾಚಿತ್ರಗ್ರಾಹಕ ಎಂ.ವೈ. ಘೋರ್ಪಡೆ ಅವರ ಕುರಿತ ಪರಿಚಯಾತ್ಮಕ ಲೇಖನ)
2. ಪ್ರದರ್ಶನ ಕಲೆಗಳ ಸ್ವರೂಪ– ಬರಗೂರು ರಾಮಚಂದ್ರಪ್ಪ
3. ವಿದ್ಯಾರ್ಥಿಗಳಿಗೇಕೆ ಸಾಹಿತ್ಯ– ಕುವೆಂಪು

**2. ಬಿ.ಎಸ್.ಡಬ್ಲ್ಯು– ಕನ್ನಡ ಭಾಷಾ ಪಠ್ಯ** : ಸಮಾಜ ಕಾರ್ಯ ಕನ್ನಡ

## B.S.W Degree/ Honours Degree Programme: Social work and other subjects

**Semester 1 ಬಿ.ಎಸ್.ಡಬ್ಲ್ಯು– ಕನ್ನಡ ಭಾಷಾ ಪಠ್ಯ** : ಸಮಾಜ ಕಾರ್ಯ ಕನ್ನಡ

ಪ್ರಧಾನ ಸಂಪಾದಕರು ಡಾ.ಸಿ.ನಾಗಭೂಷಣ ನಿರ್ದೇಶಕರು, ಕನ್ನಡ ಅಧ್ಯಯನ ವಿಭಾಗ

ಸಂಪಾದಕರು: ಡಾ.ಶೋಭಾ.ಎಂ.ಸಿ, ಪ್ರೊ.ಕರಿಬಸವನಗೌಡ. ಜಿ

ಡಾ.ಸಿದ್ದಲಿಂಗಪ್ಪ. ಎಸ್ ದೇಶ್‌ಮುಖ್, ಶ್ರೀಮತಿ ಸುಜಾತ. ಎ

| Course Title: | ಬಿ.ಎಸ್.ಡಬ್ಲ್ಯು– ಕನ್ನಡ ಭಾಷಾ ಪಠ್ಯ : ಸಮಾಜ ಕಾರ್ಯ ಕನ್ನಡ |
|---|---|
| Total Contact Hours: | Course Credits:03 ವಾರಕ್ಕೆ ಬೋಧನಾ ಅವಧಿ 4 ಗಂಟೆಗಳು |
| Formative Assessment Marks: 40 (CIE) | Duration of ESA/Exam: 3 hours |
| Model Syllabus Authors: Multiple Authors | Summative Assessment Marks: 60 (SEE) |

ಕೋರ್ಸ್‌ಗಳ ವಿವರಗಳು

| ವಿವರಗಳು | ಬೋಧನಾ ಅವಧಿ |
|---|---|
| ಘಟಕ–1 ಕನ್ನಡ ನಾಡು–ನುಡಿ–ಚಿಂತನೆ | 13/14 |
| ಘಟಕ–2 ಪ್ರಕೃತಿ | 13/14 |
| ಘಟಕ–3 ಬಾಲ್ಯ | 13/14 |
| ಘಟಕ–4 ಸಂಕೀರ್ಣ | 13/14 |

**ಘಟಕ – 1**

**ಕನ್ನಡ ನಾಡು–ನುಡಿ–ಚಿಂತನೆ:**

ಕನ್ನಡ ನಾಡು ರೂಪುಗೊಂಡದ್ದರಿಂದ ಪ್ರಾರಂಭಿಸಿ ಅದರ ಶ್ರೀಮಂತಿಕೆ, ವೈಶಿಷ್ಟ್ಯತೆ, ಅದರ ಲೋಕದೃಷ್ಟಿ, ಕಲಾ ಪ್ರಕಾರಗಳಲ್ಲಿನ ಸಮೃದ್ಧತೆ, ರಾಜಕೀಯ ಸಾಮಾಜಿಕ ಚಿಂತನೆಗಳ ಸೋಪಜ್ಞತೆ. ಅದರ ಭೌಗೋಳಿಕ ಸೌಂದರ್ಯ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಮಹತ್ವದ ಚಳುವಳಿಗಳು, ಭಾರತ ಮತ್ತು ವಿಶ್ವಕ್ಕೆ ಕನ್ನಡದ ಕೊಡುಗೆಗಳು ಇವುಗಳಲ್ಲಿ ಕೆಲವನ್ನು ಆಯ್ದು ಪಠ್ಯವನ್ನು ರೂಪಿಸಲಾಗಿದೆ.

ಘಟಕ –1 ನಾಡು ನುಡಿ ಚಿಂತನೆ

1.ಪ್ರಧಾನ ಪಠ್ಯ : ಮಾತೃಭಾಷಾ ಮಾಧ್ಯಮದ ಪ್ರಶ್ನೆ ಪರಿಹಾರ ಸಾಧ್ಯ : ಸುಪ್ರಿಂಕೋರ್ಟ್ ತೀರ್ಪು – ದೇವನೂರು

ಪೂರಕ ಪಠ್ಯ : ವಿಜ್ಞಾನ ಮತ್ತು ತಂತ್ರಜ್ಞಾನ ಕಲಿಕೆಯಲ್ಲಿ ಮಾತೃಭಾಷೆ... – ಯಳನಾಡು ಆಂಜನಪ್ಪ.

2.ಪ್ರಧಾನ ಪಠ್ಯ : ಜನಭಾಷೆಯೆ ಸಾಮಾನ್ಯನ ಅಭ್ಯುದಯ ಸಾಧನ– ಕುವೆಂಪು

ಪೂರಕ ಪಠ್ಯ : ಕನ್ನಡ ನಾಮಫಲಕಗಳಲ್ಲಿ ಭಾಷೆ ಬಳಕೆ –ಡಾ. ಅಶೋಕ್‌ಕುಮಾರ್ ರಂಜೇರೆ.

3.ಪ್ರಧಾನ ಪಠ್ಯ : ನಾಡಿನ ಹಾಡು ಆನಂದಕಂದ (ಬೆಟಗೇರಿ ಕೃಷ್ಣಶರ್ಮ)

ಪೂರಕ ಪಠ್ಯ: ಕನ್ನಡ ಬಾಂಧವರ ಬೇಟಿ – ಬಸವರಾಜ ಕಟ್ಟಿಮನಿ

ಘಟಕ–2

ಪ್ರಕೃತಿ:

ಮನುಷ್ಯ ಜೀವಿಯು ಪ್ರಕೃತಿಯ ಅವಿಭಾಜ್ಯ ಅಂಗ. ಪ್ರಕೃತಿ ಮತ್ತು ಮನುಷ್ಯರ ನಡುವಿನ ಸಂಬಂಧವನ್ನು ಕುರಿತ ಹಲವು ಆಯಾಮಗಳು ರೂಪುಗೊಂಡಿವೆ ಮತ್ತು ಚಾಲ್ತಿಯಲ್ಲಿವೆ. ಅವುಗಳಲ್ಲಿ ಮೊದಲನೆಯದ್ದೆಂದರೆ ಪ್ರಕೃತಿಯನ್ನು ಮೂಲದೇವತೆಯೆಂದು ನೋಡುವ ಆರಾಧನಾ ನೆಲೆ ಅಥವಾ ಮಾತೃನೆಲೆ. ಇದು ಬಹುತೇಕ ಕಾಲಾತೀತ ಎನ್ನುವ ಹಾಗೆ ನಡೆದುಕೊಂಡು ಬಂದಿದೆ. ಎರಡನೆಯದು ಪ್ರಕೃತಿಯು ಮನುಷ್ಯರ ಉಪಭೋಗಕ್ಕಾಗಿಯೇ ಇದೆಯೆಂದು ನೋಡುವ ಭೋಗವಾದಿ ನೆಲೆ. ಮೂರನೆಯ ಮುಖ್ಯವಾದ ನೆಲೆ ಎಂದರೆ ಸೌಂದರ್ಯ ಮೀಮಾಂಸೆಯ ನೆಲೆ. ಇದು ಕಲಾ ಮೀಮಾಂಸೆಯ ಜೊತೆಯಲ್ಲಿಯೇ ಬೆಳೆದು ಬಂದಿದೆ. ಈ ಮೂರು ನೆಲೆಗಳ ಜೊತೆಯಲ್ಲಿಯೇ ಪ್ರಕೃತಿಯು ಮನುಷ್ಯರಿಗೆ ಗುರುವೂ, ಮಾದರಿಯೂ ಆಗುವ ಹಲವು ಅಂಶಗಳನ್ನು ಗುರುತಿಸಿ ಕೊಳ್ಳಲಾಗಿದೆ. ಸಕಲ ಜೀವಜಾತಗಳನ್ನು ಪೊರೆಯುವ, ಬದುಕಲು ಅವಕಾಶ ಮಾಡಿಕೊಡುವ ಸಹಬಾಳ್ವೆಯ ಮೂಲಪಾಠವನ್ನು ಮನುಷ್ಯರು ಇನ್ನೂ ಕಲಿಯಬೇಕಾಗಿದೆ. ಹಾಗೆಯೇ ಪ್ರಾಕೃತಿಕ ನ್ಯಾಯದ ನೆಲೆಯು ನಾಗರಿಕತೆಯ ಮೌಲ್ಯ ವ್ಯವಸ್ಥೆಯನ್ನೇ ಪುನರ್‌ರಚಿಸಲು ಅವಕಾಶಮಾಡಿಕೊಡುತ್ತದೆ. ನಿತ್ಯನೂತನತೆಯ ನೆಲೆ, ಶಾಶ್ವತ ಮತ್ತು ನಶ್ವರತೆಯ ನೆಲೆ ಜೀವಪರತೆಯ ನೆಲೆ/ ಕ್ರಿಯಾಶೀಲತೆಯ ನೆಲೆ ಇತ್ಯಾದಿ ಅಂಶಗಳನ್ನು ಒಳಗೊಳ್ಳುವ ಪಠ್ಯಗಳನ್ನು ಸೇರಿಸಿಕೊಳ್ಳಲಾಗಿದೆ.

1.ಪ್ರಧಾನ ಪಠ್ಯ : ಆಗುಂಬೆ –ಬಿ.ಜಿ.ಎಲ್ ಸ್ವಾಮಿ

ಪೂರಕ ಪಠ್ಯ : ನನ್ನ ಹಿಮಾಲಯ : ಓ.ಎಲ್.ನಾಗಭೂಷಣಸ್ವಾಮಿ

2.ಪ್ರಧಾನ ಪಠ್ಯ : ಪಾತರಗಿತ್ತಿ – ಪೂರ್ಣಚಂದ್ರತೇಜಸ್ವಿ

ಪೂರಕ ಪಠ್ಯ : ಪರಂಗಿ ಎಂಬ ಔಷಧೀಯ ವೃಕ್ಷ –ನೇಮಿಚಂದ್ರ

3.ಪ್ರಧಾನ ಪಠ್ಯ : ವೃಕ್ಷಮಾತೆ ತಿಮ್ಮಕ್ಕ – ಶ್ರೀಧರ ಬನವಾಸಿ ಜಿಸಿ

ಪೂರಕ ಪಠ್ಯ : ಪರಿಸರರಕ್ಷಣೆ ಮತ್ತು ಸಮಾಜವಾದ– ವಿಲಿಯಮ್ಸ್

ಘಟಕ–3

ಬಾಲ್ಯ:

ಬಾಲ್ಯವು ಮಾನವ ಬದುಕಿನ ಅತ್ಯಂತ ಮುಖ್ಯವಾದ ಮಾತ್ರವಲ್ಲ, ಸುಂದರವಾದ ಘಟ್ಟವೂ ಹೌದು. ಮನುಷ್ಯರ ವ್ಯಕ್ತಿತ್ವವು ಬಾಲ್ಯದ ಧಾತುವಿನಿಂದಲೇ ರೂಪುಗೊಳ್ಳುತ್ತದೆ ಎನ್ನುತ್ತಾರೆ ಮನೋವಿಜ್ಞಾನಿಗಳು. ಆ ಕಾಲವೊಂದಿತ್ತು ಬಾಲ್ಯ ತಾನಾಗಿತ್ತು ಎನ್ನುವ ಕವಿವಾಣಿಯೂ ಇದನ್ನು ಸಮರ್ಥಿಸುತ್ತದೆ. ಬಹುಸಂಖ್ಯಾತರು ಬಾಲ್ಯದಲ್ಲಿ ಕಂಡ ಕನಸುಗಳನ್ನು ನನಸಾಗಿಸಿಕೊಳ್ಳುವುದನ್ನೇ ಬದುಕಿನ ಗುರಿಯಾಗಿಸಿಕೊಂಡಿರುತ್ತಾರೆ ಎನ್ನುವ ಅಂಶ ಬಾಲ್ಯದ ನಿರ್ಣಾಯಕ ಪಾತ್ರವನ್ನು ಹೇಳುತ್ತದೆ. ಬಾಲ್ಯದ ಮುಗ್ಧತೆ, ನಂಬಿಕೆ, ಕರಾರುಗಳಿಲ್ಲದ ಪ್ರೀತಿ, ಬದುಕಿನ ಪ್ರತಿ ಕ್ಷಣವನ್ನು ಉತ್ಕಟವಾಗಿ ಅನುಭವಿಸುವ ಮನಸ್ಥಿತಿ, ಕ್ಷಮಾಗುಣ ಈ ಎಲ್ಲವೂ ಪ್ರೌಢಾವಸ್ಥೆಯಲ್ಲಿ ಮಾಯವಾಗುತ್ತಾ ಹೋಗುತ್ತದೆ. ಆದರೆ ಈ ಎಲ್ಲ ಗುಣಗಳನ್ನು ಉಳಿಸಿಕೊಳ್ಳಬೇಕು ಎನ್ನುವ ಹ0ಬಲವೂ ಮನುಷ್ಯರಲ್ಲಿ ನಿರಂತರವಾಗಿ ಇದ್ದೇ ಇರುತ್ತದೆ. ಹೀಗೆ ರಮ್ಯವಾಗಿ ಕಾಣಿಸುವ

ಬಾಲ್ಯಕಾಲಕ್ಕೆ ದುರಂತದ ಮುಖವೂ ಇದೆ. ಬಾಲಕಾರ್ಮಿಕರಿಂದ ಹಿಡಿದು, ಶಿಕ್ಷಣ ವಂಚಿತರಾದ, ಇನ್ನಿತರ ಹಲವು ಬಗೆಯ ಶೋಷಣೆ ಮತ್ತು ದೌರ್ಜನ್ಯಗಳಿಗೆ ಒಳಗಾಗುವ ಸಂದರ್ಭಗಳನ್ನೂ ಪಠ್ಯದ ತಯಾರಿಯ ಸಂದರ್ಭದ ಗಮನಿಸಿ

1.ಪ್ರಧಾನ ಪಠ್ಯ : ಕೆಲವು ನೆನಪುಗಳು – ನವರತ್ನರಾಮರಾಯ

ಪೂರಕ ಪಠ್ಯ : ಅಭಿಶಿಕ್ಷಣ–1, ಎಪಿಜೆ ಅಬ್ದುಲ್ ಕಲಾಂ ಜೀವನಚರಿತ್ರೆಯ ಆಯ್ದ ಭಾಗ–ಜಯಪ್ರಕಾಶ್ ಪುತ್ತೂರು.

2.ಪ್ರಧಾನ ಪಠ್ಯ : ನನ್ನ ಭಯಾಗ್ರಫಿ –ಬೀ.ಚಿ (ಭೀಮಸೇನ ರಾವ್)

ಪೂರಕ ಪಠ್ಯ : ಚಾರ್ಲಿ ಚಾಪ್ಲೀನ್ – ಕುಂಬಾರ ವೀರಭದ್ರಪ್ಪ

3.ಪ್ರಧಾನ ಪಠ್ಯ : ಹಬ್ಬಗಳ ಬಾಲ್ಯ – ಹೆಚ್. ನಾಗವೇಣಿ

ಪೂರಕ ಪಠ್ಯ : ಪಾಬ್ಲೋ ನೆರುಡಾ : ಬಾಲ್ಯ ಜೀವನ – ಕೆ.ಎಸ್ ನಿಸಾರ್ ಅಹಮದ್

ಘಟಕ–4

ಸಂಕೀರ್ಣ

* ಈ ಭಾಗದಲ್ಲಿ ಕಲೆ ಮತ್ತು ಸಾಹಿತ್ಯ, ಕಲೆ ಮತ್ತು ಮನೋವಿಕಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ನೀಡಲಾಗಿದೆ
* ಕಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಪಠ್ಯದಲ್ಲಿಲ್ಲದ ವಿಷಯಗಳನ್ನು ಕೊಡಲಾಗಿದೆ.
* ಇದಕ್ಕೆ ಸಂಬಂಧಿಸಿದ ವಿಶೇಷ ಪಠ್ಯಗಳನ್ನು ಆಧರಿಸಿದಂತೆ ಜ್ಞಾನವನ್ನು ಹೆಚ್ಚಿಸುವುದಕ್ಕೆ ಆದ್ಯತೆ ನೀಡಲಾಗಿದೆ.

1.ಪ್ರಧಾನ ಪಠ್ಯ : ಶರಣೆಯರ ಸಮಾಜಕಾರ್ಯ–ಡಾ. ಮಲ್ಲಿಕಾರ್ಜುನ ಲಠ್ಠೆ

ಪೂರಕ ಪಠ್ಯ : ಸಮಾಜ ಸೇವೆ ಪರಿಕಲ್ಪನೆ ಆಶಯ – ಪ್ರೊ. ಎಚ್.ಪಿ ಮಲ್ಲೇದೇವರು

2.ಪ್ರಧಾನ ಪಠ್ಯ : ಮಡಿಲಿಗೊಂದು ಮಗು – ಪದ್ಮ ಸುಬ್ಬಯ್ಯ

ಪೂರಕ ಪಠ್ಯ : ಕಪ್ಪು ಮೋಡದಲ್ಲೊಂದು ಬೆಳ್ಳಿರೇಖೆ – ಎಚ್.ಎಂ. ಮರುಳಸಿದ್ಧಯ್ಯ

3.ಪ್ರಧಾನ ಪಠ್ಯ : ಸಮಾಜಕಾರ್ಯದಲ್ಲಿ ಮನೋವಿಜ್ಞಾನ – ಪ್ರದೀಪ ಎಂ.ಪಿ.

ಪೂರಕ ಪಠ್ಯ : ವಿಪತ್ತು ನಿರ್ವಹಣೆಯಲ್ಲಿ ಸಮಾಜಕಾರ್ಯ– ಗಂಗಾಧರ ರೆಡ್ಡಿ, ಲೋಕೇಶ ಎಂ.ವಿ.

ಸಮಾಜಕಾರ್ಯದಲ್ಲಿ ಒಂದು ಪ್ರಯೋಗ–ಡಾ. ಎಚ್.ಎಂ . ಮರುಳಸಿದ್ದಯ್ಯ

ಸಮಾಜ ಸೇವೆಯಲ್ಲಿ ಎದುರಾಗುವ ಸಮಸ್ಯೆಗಳು –ಎನ್.ಎಂ. ಕೆ ಸೋಗಿ

ಮಹಾದೇವಪ್ಪ ರಾಂಪುರೆ ಸಾಮಾಜಿಕಚಿಂತನೆ–ಡಾ. ಬಸವರಾಜ ಪೋಲೀಸ್ ಪಾಟೀಲ

## Semester –2

| **Course Title:** **ಬಿ.ಎಸ್.ಡಬ್ಲ್ಯು– ಕನ್ನಡ ಭಾಷಾ ಪಠ್ಯ** : ಸಮಾಜ ಕಾರ್ಯ ಕನ್ನಡ | |
|---|---|
| Total Contact Hours: 52 to 56 | Course Credits : 03 |
| Formative Assessment Marks : 40(CIE) | Duration of ESA/EXAM: 3 hours |
| Model Syllabus Authors: Multiple Authors | Summative Assessment Marks: 60 (SEE) |

| **Course Title:** ಬಿ.ಎಸ್.ಡಬ್ಲ್ಯು– ಕನ್ನಡ ಭಾಷಾ ಪಠ್ಯ : ಸಮಾಜ ಕಾರ್ಯ ಕನ್ನಡ | |
|---|---|
| ಘಟಕ–1 ಜಾಗತೀಕರಣ | 13/14 |
| ಘಟಕ–2 ಸಮಾಜ | 13/14 |
| ಘಟಕ–3 ಪ್ರೀತಿ | 13/14 |
| ಘಟಕ–4 ಸಂಕೀರ್ಣ | 13/14 |

ಘಟಕ – 1

ಜಾಗತೀಕರಣ:

ಜಾಗತೀಕರಣವು ಸಮಕಾಲೀನ ಜಾಗತಿಕ ವಿದ್ಯಮಾನವಾಗಿದ್ದು, ಅದು ಇಂದು ಆಯ್ಕೆಯಾಗಿ ಉಳಿದಿಲ್ಲ. ಅದು ಬೇಕಾಗಿ ಬೇಡವಾಗಿ ಎಲ್ಲರಾಷ್ಟ್ರಗಳೂ ಅನಿವಾರ್ಯವಾಗಿ ಒಳಗಾಗುತ್ತಿರುವ ಒಂದು 'ಪ್ರಕಿಯೆಯಾಗಿದೆ. ಇಡೀ ವಿಶ್ವವನ್ನೇ "ಏಕತಾಣ' ವಾಗಿ "ವಿಶ್ವ ಹಳ್ಳಿಯಾಗಿ ರೂಪಿಸುವುದು ಇದರ ಉದ್ದೇಶವಾಗಿದೆ. ಆದರೆ ಇದರ ಪರಿಣಾಮವು ಮಾತ್ರ ಇದಕ್ಕೆ ವಿರುದ್ಧವಾಗಿದೆ. ಇದರ ನೇತ್ಯಾತ್ಮಕ ಮತ್ತು ನೇತ್ಯಾತ್ಮಕ ಅಂಶಗಳನ್ನು ಪಠ್ಯ ಗಳಾಗಿ ಇಡುವ ಮೂಲಕ ವಿದ್ಯಾ ರ್ಥಿಗಳಲ್ಲಿ ಸಮಕಾಲೀನ ಆಗುಹೋಗುಗಳನ್ನು ಕುರಿತ ಅರಿವನ್ನು ಹೆಚ್ಚಿಸಬಹುದಾಗಿದೆ. ಸಂಸ್ಕೃತಿಗಳ ವೈವಿಧ್ಯತೆ, ಜೀವಂತಿಕೆಯನ್ನು ನಾಶ ಮಾಡುತ್ತಾ ಏಕರೂಪಿ ಸಂಸ್ಕೃತಿಯನ್ನು ಇದು ರೂಪಿಸುತ್ತಿದೆ. "ಆಹಾರ ವಸ್ತ್ರ ಕ್ರೀಡೆ, ಸಾಂಸ್ಕೃತಿಕ ಆಚರಣೆಗಳು, ದೈ ನಂದಿನ ಬಳಕೆಯ ಉತ್ಪನ್ನಗಳು: ಈ ಎಲ್ಲದರ ಮೇಲೂ ಬಲಾಢ್ಯ ರಾಷ್ಟ್ರಗಳ ಆಕ್ರಮಣವಾಗುತ್ತಿದೆ. ಭಾರತವೂ ಸೇರಿದಂತೆ ಮೂರನೇ ಜಗತ್ತಿನ ರಾಷ್ಟ್ರಗಳು ಇದರ ಮೂಲ ಬಲಿಪಶುಗಳಾಗುತ್ತಿವೆ ಎನ್ನುವುದನ್ನು" ನಾವು ಅವಶ್ಯವಾಗಿ ಗಮನಿಸಬೇಕು. ಅನೇಕತೆಯಲ್ಲಿ ಏಕತೆ ಎನ್ನುವ ಜನತಾಂತ್ರಿಕ ಆಶಯಕ್ಕೆ ವಿರುದ್ಧವಾಗಿ ಏಕತೆಯ ದಬ್ಬಾಳಿಕೆಯ ಮೂಲಕ ಅನೇಕ ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಗಳನ್ನೇ ನಾಶ ಮಾಡುವ ಮೂಲಕ ಹಲವು ವೃತ್ತಿಗಳನ್ನೇ' ಇದು ವಿನಾಶದಂಚಿಗೆ ತಳ್ಳುತ್ತಿದೆ ಎನ್ನುವ ಅಂಶವನ್ನೂ ಗಮನಿಸಬೇಕು.ಅಮಾನವೀಯ ಮಾನೋವಿನ್ಯಾಸವನ್ನೂ ಇದು ರೂಪಿಸುತ್ತಿದೆ.

ಬಿ.ಎಸ್ ಡಬ್ಲು ಎರಡನೇ ಸೆಮಿಸ್ಟರ್ ಪದವಿ ಪಠ್ಯ

1. ಪ್ರಧಾನ ಪಠ್ಯ : ಜಾಗತಿಕರಣ ಎಂಬ ವಿಷ ಕನ್ಯೆ – ಎಸ್. ಚಂದ್ರಕಿರಣ್

ಪೂರಕ ಪಠ್ಯ : ಅಂಗುಲ ಹುಳುವಿನ ಪರಕಾಯ ಪ್ರವೇಶ – ಎ.ಕೆ ರಾಮಾನುಜನ್

ಅಥವಾ

ಗಿಡುಗ ಮತ್ತು ಎರೆಹುಳ : ಎಸ್. ಜಿ ಸಿದ್ದರಾಮಯ್ಯ.

2. ಟೌನ್‌ಶಿಪ್ : ರೈತ / ಕೂಲಿ ಕಾರ್ಮಿಕರನ್ನು ಮುಳುಗಿಸಲಿರುವ ಟೈಟಾನಿಕ್: ಆರ್. ವಿ. ಚಂದ್ರಶೇಖರ್ ರಾಮೇನಹಳ್ಳಿ

ಪೂರಕ ಪಠ್ಯ : ಜಾಗತಿಕರಣದ ಸಾಂಸ್ಕೃತಿಕ ಪರಿಣಾಮಗಳು – ಅರವಿಂದ ಚೊಕ್ಕಾಡಿ

3. ಗಿರಣಿಯ ವಿಸ್ತಾರ ನೋಡಮ್ಮ : ಶಿಶುನಾಳ ಶರೀಫ

ಪೂರಕ ಪಠ್ಯ : ಯುನೈಟೆಡ್ ಫ್ರೂಟ್ ಕಂಪನಿ : ಕೆ.ಎಸ್ ನಿಸಾರ ಅಹಮದ್.

ಘಟಕ–2.

ಸಮಾಜ:

ಮಾನವ ಸಮುದಾಯವು ಕುಟುಂಬದ ನಂತರ ರೂಪಿಸಿಕೊಂಡ ಘಟಕ ಇದು. ಹಲವು ವೃತ್ತಿಗಳ, ವರ್ಗಗಳ ಮತ್ತು ಲಿಂಗಗಳ ವ್ಯವಸ್ಥೆಯಾಗಿ ಮೇಲ್ನೋಟಕ್ಕೆ ಇದು ಕಂಡರೂ ನಿಜದಲ್ಲಿ ಪ್ರಕೃತಿ, ಪ್ರಾಣಿ, ಪಕ್ಷಿಗಳು, ಪ್ರಭುತ್ವ, ಸಾಮಾಜಿಕ ಸಂರಚನೆ, ಧಾರ್ಮಿಕ ವ್ಯವಸ್ಥೆ ಈ ಎಲ್ಲವೂ ಸೇರಿ ಸಮಾಜವೊಂದು ರೂಪುಗೊಳ್ಳುತ್ತದೆ. ಮಾನವರಿಗೆ ವೈಯಕ್ತಿಕ ಬದುಕು ಮತ್ತು ವ್ಯಕ್ತಿತ್ವ ಇರುವಂತೆಯೇ ಸಾಮಾಜಿಕ ಬದುಕು ಮತ್ತು ವ್ಯಕ್ತಿತ್ವವೂ ಇರಬೇಕು ಎನ್ನುವುದನ್ನು ಸಮಾಜ ವ್ಯವಸ್ಥೆಯು ಒತ್ತಾಯಿಸುತ್ತದೆ. ಮನುಷ್ಯ ಮೂಲತಃ ಸಂಘಜೀವಿಯಾದ್ದರಿಂದ ಸಮಾಜವನ್ನು ನಿರಾಕರಿಸಿ ಬದುಕುವುದು ಸಾಧ್ಯವಿಲ್ಲ. ಭಾರತದಂತಹ ಶ್ರೇಣೀಕೃತ ವ್ಯವಸ್ಥೆಯಲ್ಲಿ ಸಮಾಜವು ಬಹುಮುಖಿ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದೆ. ಸಮಾಜವು ನೈತಿಕ ಕಾವಲುಗಾರನ ಜವಾಬ್ದಾರಿಯನ್ನು ನಿಭಾಯಿಸಬೇಕೆನ್ನುವುದು ಆದರ್ಶ. ಆದರೆ ವಾಸ್ತವವು ಇದಕ್ಕೆ ವಿರುದ್ಧವಾಗಿದೆ. ಪಟ್ಟಭದ್ರರ ಕೈಮೇಲಾಗುತ್ತಾ ಬಂದಿರುವುದನ್ನು ಇತಿಹಾಸದುದ್ದಕ್ಕೂ ನಾವು ಗಮನಿಸಬಹುದು. ಪಠ್ಯಗಳು ಈ ಎಲ್ಲ ಅಂಶಗಳನ್ನೂ ಒಳಗೊಂಡರೆ ಅದಕ್ಕೆ ಸಮಗ್ರತೆ ಸಿಗುತ್ತದೆ. ಅದಕ್ಕೆ ಸಂಬಂಧಿಸಿದ ಪಠ್ಯಗಳನ್ನು ನೀಡಲಾಗುವುದು.

1. ಪ್ರಧಾನ ಪಠ್ಯ : ರಾಧೆಯ ಪ್ರೀತಿ – ಆನಂದ

ಪೂರಕ ಪಠ್ಯ : ಶಾಂಗ್ರೀಲಾ – ಬಿ.ಆರ್ ಲಕ್ಷ್ಮಣ ರಾವ್

2. ಪ್ರಧಾನ ಪಠ್ಯ : ಮಾ ನಿಷಾದ – ಗಿರೀಶ್ ಕಾರ್ನಾಡ್

ಪೂರಕ ಪಠ್ಯ : ವಾಲ್ಮೀಕಿಯ ಭಾಗ್ಯ – ಕುವೆಂಪು

3. ಪ್ರಧಾನ ಪಠ್ಯ : ತಂದೆ – ಪಿ ಲಂಕೇಶ್

ಪೂರಕ ಪಠ್ಯ : ತಾಯಿ – ಯು .ಆರ್. ಅನಂತ ಮೂರ್ತಿ

ಘಟಕ–3

ಪ್ರೀತಿ:

ಪ್ರೀತಿ ಎನ್ನುವುದು ಮನುಷ್ಯರ ಮಾತ್ರವಲ್ಲ ಜಗದ ಮೂಲತತ್ವವೇ ಆಗಿದೆ. ಬದುಕನ್ನು, ಸಂಬ0ಧಗಳನ್ನು, ವೃತ್ತಿಯನ್ನು, ಸಮುದಾಯವನ್ನು ಹೀಗೆ ಯಾವುದನ್ನೇ ತೆಗೆದುಕೊಂಡರೂ ಪ್ರೀತಿಯ ಜೀವದ್ರವ್ಯವಿಲ್ಲದೆ ಯಾವುದನ್ನೂ ಕಟ್ಟಲಾಗದು. ಪ್ರೀತಿ ಅಕಾರಣವಾಗಿರಬೇಕು ದ್ವೇಷ ಸಕಾರಣವಾಗಿರಬೇಕು ಎನ್ನುವ ತತ್ವಜ್ಞಾನಿಯ ಮಾತು ಪ್ರೀತಿಯ ಪೋಷಕ ಶಕ್ತಿಯನ್ನೂ ದ್ವೇಷದ ವಿನಾಶಕ ಶಕ್ತಿಯನ್ನೂ ಹೇಳುತ್ತದೆ. ಪ್ರೀತಿಗೆ ಅಸಾಧ್ಯವಾದುದು ಯಾವುದೂ ಇಲ್ಲ ಎನ್ನುವುದು, ಪ್ರೀತಿಯ ಅಸಾಧಾರಣ ಸಾಧ್ಯತೆಯನ್ನುಬಿಂಬಿಸುತ್ತದೆ. ಅಪ್ಪಟ ಪ್ರೀತಿಯು ಎಲ್ಲವನ್ನೂ ಒಳಗೊಳ್ಳುತ್ತಾ, ಎಲ್ಲರನ್ನೂ, ಎಲ್ಲವನ್ನೂ ಬೆಳೆಸುವ ಆಶಯದ್ದು. ಆದ್ದರಿಂದಲೇ ಪ್ರೀತಿತತ್ವವು "ಒಳಗೊಳ್ಳುವ' ನೆಲೆಯದ್ದೇ ಹೊರತು ನಿರಾಕರಣೆಯ ನೆಲೆಯದ್ದಲ್ಲ. ಪ್ರೀತಿಯನ್ನು ಜೀವಾನುಕಂಪೆ ಎಂದೂ ಕರೆಯಬಹುದು.ಸಾಮರಸ್ಯದ ಬದುಕಿನ ಅಗತ್ಯವಿರುವ ಪ್ರಸ್ತುತ ಬದುಕಿನ ಸಂದರ್ಭದಲ್ಲಿ ಪ್ರೀತಿ ತತ್ವವನ್ನು ಬೆಳೆಸುವ ಪಠ್ಯಗಳನ್ನು ವಿದ್ಯಾರ್ಥಿಗಳಿಗೆ ಓದಿಸುವುದು ಅತ್ಯವಶ್ಯ.

1. ಪ್ರಧಾನ ಪಠ್ಯ : ನಿಮ್ಮೊಲುಮೆಯಿಂದಲೆ – ಕೆ.ಎಸ್ ನರಸಿಂಹ ಸ್ವಾಮಿ

ಪೂರಕ ಪಠ್ಯ : ನಮ್ಮ ನಿಮ್ಮ ನಡುವೆ – ಶುಭ .ಎ ಆರ್

ಅಥವಾ

ಮದುವೆ ಆಲ್ಬಂ : ಗಿರೀಶ್ ಕಾರ್ನಾಡರ ನಾಟಕದ ಆಯ್ದ ಭಾಗ

2. ಪ್ರಧಾನ ಪಠ್ಯ : ಮೃಗ ಮತ್ತು ಸುಂದರಿ – ಪಿ ಲಂಕೇಶ್

ಪೂರಕ ಪಠ್ಯ : ಬೆಳ್ಳಕ್ಕಿ ಸಾಲು (ಗೀತ ನಾಟಕ) – ಡಾ. ಬಸವರಾಜ ಸಬರದ

ಅಥವಾ

ಸುಶಿಕ್ಷಿತರ ಸಂಸಾರ – ಶ್ಯಾಮಲಾ ಬೆಳಗಾವಕರ್

3. ಪ್ರಧಾನ ಪಠ್ಯ : ಮೋಕ್ಷವ ಹುಡುತ್ತ ಪ್ರೀತಿ ಬಂಧನದಲ್ಲಿ – ಪಿ ಲಂಕೇಶ್

ಪೂರಕ ಫಠ್ಯ : ರೋಜಾಗಳ ನಡುವೆ ಅರಳುವ ಹುಡುಗಿ – ಕೆ.ಎಸ್ ನಿಸಾರ ಅಹಮದ್

ಅಥವಾ

ಮಹಾರಾತ್ರಿ : (ನಾಟಕದ ಆಯ್ದ ಭಾಗ) : ಕುವೆಂಪು

ಘಟಕ–4

ಸಂಕೀರ್ಣ

- ಕಲಾ ವಿಷಯಗಳ ಪ್ರಾಮುಖ್ಯತೆ ಮತ್ತು ಪ್ರಯೋಜನ.
- ಸಾಹಿತ್ಯದ ಅಗತ್ಯತೆ.
- ಸಾಹಿತ್ಯ ಮತ್ತು ಇತರ ಶಿಸ್ತುಗಳ ಸಂಬಂಧ.

1. ಪ್ರಧಾನ ಪಠ್ಯ : ಶಿಕ್ಷಣ ಮತ್ತು ಸುಸ್ಥಿತಿ – ಪಾದೇಕಲ್ಲು ನರಸಿಂಹ ಭಟ್ಟ

ಪೂರಕ ಪಠ್ಯ : ಗಾಂಧಿ ಮತ್ತು ಶ್ರಮ ಸಂಸ್ಕೃತಿ – ಡಾ. ಎಂ ಕೆ ಪುರುಷೋತ್ತಮ

2. ಪ್ರಧಾನ ಪಠ್ಯ : ಗಾಂಧೀಜಿ ಮತ್ತು ಸಮಾಜ ಪರಿವರ್ತನೆ – ಡಾ. ಎಚ್ ಎಸ್ ದೊರೆಸ್ವಾಮಿ

ಪೂರಕ ಪಠ್ಯ : ಹಿಂದ್ ಸ್ವರಾಜ್ : ಗಾಂಧಿ ಅವರ ಸಂದರ್ಶನದ ಆಯ್ದ ಭಾಗ

3. ಪ್ರಧಾನ ಪಠ್ಯ : ಸಮಾಜ ಸೇವೆ ಮತ್ತು ಶಿಕ್ಷಣ – ಎಸ್.ಆರ್ ರಾಮ ಸ್ವಾಮಿ

ಪೂರಕ ಪಠ್ಯ : ರಾಷ್ಟ್ರ ನಿರ್ಮಾಣದಲ್ಲಿ ಯುವಕರ – ಪ್ರೊ. ಆರ್ .ರಾಚಪ್ಪ..

### 3. ಬಿ.ವಿ.ಎ/ಬಿಎಫ್ಎ– ಕನ್ನಡ ಭಾಷಾ ಪಠ್ಯ : ಲಲಿತಕಲಾ ಕನ್ನಡ

## B.V.A/B.F.A Degree Programme

## Semester 1 ಬಿ.ವಿ.ಎ/ಬಿಎಫ್ಎ– ಕನ್ನಡ ಭಾಷಾ ಪಠ್ಯ : ಲಲಿತಕಲಾ ಕನ್ನಡ

ಪ್ರಧಾನ ಸಂಪಾದಕರು ಡಾ.ಸಿ.ನಾಗಭೂಷಣ ನಿರ್ದೇಶಕರು, ಕನ್ನಡ ಅಧ್ಯಯನ ವಿಭಾಗ

